ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

12 | 23 | 10 1990 | 1.50

ಸಹಸ್ರಾರು ಸಂಖ್ಯೆಯಲ್ಲಿ ಕಾರಾಗೃಹ ಜೈಲು ತುಂಬಿದರು



ರಾಜ್ಯ ಸರಕಾರವು ಏರಿಸಿರುವ ಬಸ್‌ದರವನ್ನು ಕಡಿಮೆ ಮಾಡಬೇಕೆಂದು, ರೈತರ ಮತ್ತು ಕೃಷಿ ಕೂಲಿಕಾರರ 10,000ಸಾವಿರ ರೂ ವರೆಗಿನ ಸಾಲವನ್ನು ಮನ್ನಾ ಮಾಡಲು ರಾಜ್ಯ ಸರಕಾರವು ಅಸಹಕಾರ ತೋರುತ್ತಿರುವುದನ್ನು ವಿರೋಧಿಸಿ ರಾಜ್ಯದ ನಾಲ್ಕು ವಿರೋಧ ಪಕ್ಷಗಳು ರಾಜ್ಯಾದ್ಯಂತ ಪಿಕೆಟಿಂಗ್ ಮತ್ತು ರಸ್ತೆ ತಡೆ ಚಳುವಳಿಯನ್ನು ತಾ 4-6-90 ರಂದು ಹಮ್ಮಿಕೊಂಡಿತ್ತು.

ರಾಜ್ಯದ ವಿರೋಧ ಪಕ್ಷಗಳು ನೀಡಿದ ಕರೆಯ ಮೇರೆಗೆ ರಾಜ್ಯದ ವಿವಿಡೆಡೆಗಳಲ್ಲಿ ಪ್ರತಿಭಟನಾ ಪ್ರದರ್ಶನ ನಡೆಯಿತು. ಅದರ ವಿವರಗಳು ಕೆಳಗಿನಂತಿವೆ.

ಬೆಂಗಳೂರು.

ವಿರೋಧ ಪಕ್ಷಗಳ ಕರೆಯಂತೆ ನಗರದಲ್ಲಿ ಅನೇಕ ಪ್ರಮುಖ ಸ್ಥಳಗಳಲ್ಲಿ ಪಿಕೆಟಿಂಗ್ ಹಾಗೂ ರಸ್ತೆ ತಡೆಚಳುವಳಿ ನಡೆಸಲಾಯ್ತು. ಈ ಪ್ರತಿಭಟನಾ ಚಳುವಳಿಯ ನೇತೃತ್ವವನ್ನು ಸಿ.ಪಿ.ಐ. (ಎಂ) ನ ಸೂರ್ಯನಾರಾಯಣ ರಾವ್, ಕರ್ನಾಟಕ ಪ್ರಾಂತ ರೈತ ಸಂಘದ ಜಗನ್ನಾಥ್, ಸಿ.ಪಿ.ಐ. ನ ಎಂ.ಎಸ್. ಕೃಷ್ಣನ್, ಜನತಾದಳದ, ವಿ ಎಸ್ ಕೃಷ್ಣಯ್ಯರ್, ಲೀಲಾವತಿ ಆರ್ ಪ್ರಸಾದ್, ಲಕ್ಷ್ಮೀಸಾಗರ್, ಇನ್ನು ಮುಂತಾದ ನಾಯಕರು ವಹಿಸಿದ್ದರು ಅನೇಕ ಕಡೆಗಳಲ್ಲಿ ಸಿ.ಪಿ.ಐ. (ಎಂ) ಕಾರ್ಯಕರ್ತರು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದುದು ಗಮನಾರ್ಹವಾಗಿತ್ತು ಸಾವಿರಾರು ಕಾರ್ಯಕರ್ತರು ಹಾಗೂ ಮುಖಂಡರನ್ನು ಬಂಧಿಸಿ ನಂತರ ಬಿಡುಗಡೆ ಮಾಡಿದರು.

ಕೆಂಗೇರಿಃ

ಕೆಂಗೇರಿ ಬಸ್ ನಿಲ್ದಾಣದ ಬಳಿ ಸಿ.ಪಿ.ಐ. (ಎಂ), ಜನತಾ ಪಕ್ಷ ಹಾಗೂ ಜನತಾದಳದ ನೂರಾರು ಕಾರ್ಯ ಕರ್ತರು ಸುಮಾರು ಒಂದು ಗಂಟೆಗಳ ಕಾಲ ರಸ್ತೆ ಚಳುವಳಿ ನಡೆಸಿ ಬಂಧನಕ್ಕೊಳಗಾದರು. ಬಂಧನಕ್ಕೊಳಗಾದ

ಪುಟ 8 ಕ್ಕೆ

ಗೊರ್ಬಚೇವ್-ಬುಶ್ ಶಿಖರ ಒಪ್ಪಂದ

ಈ ವರ್ಷದ ಆರಂಭದಲ್ಲಿ ಮಧ್ಯಮ ಗಾಮಿ ಪರಮಾಣು ಶಸ್ತ್ರಾಸ್ತ್ರಗಳಲ್ಲಿ ಕಡಿತಕ್ಕೆ ಆದ ಒಪ್ಪಂದದ ನಂತರ ವಿಶ್ವಕ್ಕೆ ಬದಲಾಯಿಸಲಾಗದ ಶಾಂತಿ ತರುವ ಹಾದಿಯಲ್ಲಿ, ಈ ಶಿಖರ ಒಪ್ಪಂದ ಒಂದು ದೊಡ್ಡ ಮೈಲಿಗಲ್ಲಾಗಲಿದೆ. ಸದ್ಯಕ್ಕೆ ಪ್ರಮುಖ ಪರಮಾಣು ಅಸ್ತ್ರಗಳಲ್ಲಿ ಶೇಕಡಾ 50 ಕಡಿತದ ಚೌಕಟ್ಟಿಗೆ ಸಹಿಹಾಕಲಾಗಿದ್ದು, ಇದನ್ನು ವರ್ಷದಕೊನೆಯೊಳಗೆ ಪೂರ್ಣ ರೀತಿಯ ಒಪ್ಪಂದವಾಗಿಸಲಾಗುವುದು. ಯುರೋಪಿನಲ್ಲಿ, ಅಣು-ಅಸ್ತ್ರ ರಹಿತ ಅಸ್ತ್ರಗಳಲ್ಲೂ ಕಡಿತದ ಒಪ್ಪಂದಕ್ಕೆ ಆಗ ಸಹಿಹಾಕಲಾಗುವುದು. ರಾಸಾಯನಿಕ ಅಸ್ತ್ರಗಳಲ್ಲಿ ಕಡಿತ ಮತ್ತು ಅದರ ಉತ್ಪಾದನೆಯನ್ನು ನಿಲ್ಲಿಸುವುದು ಈ ಒಪ್ಪಂದದ ಭಾಗವಾಗಿರುವುದು.

ಪ್ರಮುಖ ಪರಮಾಣು ಅಸ್ತ್ರಗಳಲ್ಲಿ ಹೆಚ್ಚಿನವು ಕ್ಷಿಪಣಿಗಳು, ಬಾಂಬರ್‌ಗಳು, ಮತ್ತು ಇತರ ಖಂಡಗಳ ನಡುವೆ ಎಸೆಯಬಲ್ಲ ವಾಹನಗಳ ಮೂಲಕ, ಹಾರಿಸಿ ಹೆಚ್ಚು ಕಡಿಮೆ ವಿಶ್ವಸಮರ ಆರಂಭಿಸುವ ಸಾಮರ್ಥ್ಯ ಉಳ್ಳಂತಹವು. ಇವುಗಳಲ್ಲಿ ಭಾರೀ ಕಡಿತ: ಪರಮಾಣು ಅಸ್ತ್ರಗಳಿಂದ ಯುದ್ಧ ಆರಂಭಿಸುವ ಸಾಧ್ಯತೆಯನ್ನು ತಗ್ಗಿಸುತ್ತವೆ.

ಇದಲ್ಲದೆ ಯುರೋಪಿನ ಭೂಸೈನ್ಯಗಳಲ್ಲಿ ಮತ್ತು ಪರಮಾಣು-ಅಲ್ಲದ ಇತರ ಶಸ್ತ್ರಾಸ್ತ್ರಗಳಲ್ಲಿ ಭಾರಿ ಕಡಿತದ ಒಪ್ಪಂದದ ಸಾಧ್ಯತೆ ಇದೆ.

ಐಕ್ಯ ಜರ್ಮನಿಯ ನಾಟೋ ಸದಸ್ಯತ್ವ ವಿವಾದಾಸ್ಪದ ವಿಷಯವಾಗಿ ಉಳಿದಿದೆ. ಮಿಲಿಟರಿ ಒಪ್ಪಂದಗಳ ಬದಲು ಯುರೋಪ್ ರಕ್ಷಣಾ ಮಂಡಲಿಯನ್ನು ಎಲ್ಲಾ ದೇಶಗಳ ರಕ್ಷಣಾ ಕಾಳಜಿಗಳನ್ನು ಕಾಪಾಡುವ ಸಂಘಟನೆಯಾಗಿ ಬೆಳೆಸಬೇಕೆಂದು ಗೊರ್ಬಚೇವ್ ಸಲಹೆ ಮಾಡಿದ್ದಾರೆ,

ಶಿಖರ ಒಪ್ಪಂದದಲ್ಲಿ ಧಾನ್ಯ ವ್ಯಾಪಾರದ ಬಗ್ಗೆ 5 ವರ್ಷದ ಹೊಸ ಒಪ್ಪಂದ ಆಗಿದೆ. ಇದಲ್ಲದೆ ವಾಣಿಜ್ಯ ವ್ಯಾಪಾರಗಳ ಬಗ್ಗೆ ಒಪ್ಪಂದಗಳು ಆಗಿವೆ. ಇದಲ್ಲದೆ ಆಫ್ಘಾನ್ ಸಮಸ್ಯೆ, ಕಾಶ್ಮೀರ ಸಮಸ್ಯೆಗಳ ಬಗ್ಗೆ ಇಬ್ಬರು ನಾಯಕರು ವಿಚಾರವಿನಿಮಯ ಮಾಡಿದರು.



ದೇಶ ಪ್ರೇಮಿ ಶಕ್ತಿಗಳಲ್ಲಿ ನವೋತ್ಸಾಹ

ಮೇ 24 ರಂದು ನವದೆಹಲಿಯಲ್ಲಿ ನಡೆದ ಕೋಮುವಾದದ, ಪ್ರತ್ಯೇಕತಾ ವಾದದ ವಿರುದ್ಧ ಸಮಾವೇಶ ದೇಶದ ವಿವಿಧ ಶಕ್ತಿಗಳನ್ನು ವಿವಿಧ ಕಾರಣ ಗಳಿಗಾಗಿ ಸೆಳೆದಿತ್ತು. ಕೋಮುವಾದಿಗಳಲ್ಲಿ ಆತಂಕ ಜಾತ್ಯತೀತರಲ್ಲಿ ಐಕ್ಯತೆ, ಸಮಗ್ರತೆ ಬಗ್ಗೆ ತಲ್ಲಣಗೊಂಡಿದ್ದವರಲ್ಲಿ ನಿರೀಕ್ಷೆ ಮೂಡಿಸಿತ್ತು.

ಮೇ 24 ರ ನಂತರ ಕೋಮುವಾದಿಗಳ ಭೀತಿ ದ್ವಿಗುಣ ಗೊಂಡಿದೆ. ಅರುಣ್ ಶೌರಿ ಯಂತಹ ಅವರ ಬುದ್ಧಿ ಜೀವಿಗಳು ಶುದ್ಧ ಸುಳ್ಳುಗಳ ಮೊರೆ ಹೋಗುವಂತೆ ಮಾಡಿದೆ. ಅತ್ತ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಕಾಲದ, ಸ್ವಾತಂತ್ರ ಹೋರಾಟದ ಕಾಲದ ಜಾತ್ಯತೀತ ಪರಂಪರೆಗೆ ಮುಸುಕಿದ್ದ ಕರಿ ಮೋಡ ಕರಗಿ ಹೋಗು ತ್ತಿರುವ ಅನುಭವವಾಗುತ್ತಿದೆ. ಜಾತ್ಯತೀತ ರಿಗೆ ಕೋಮು ವಿಷದಿಂದ ದೂಷಿತಗೊಂಡ ವಾತಾವರಣ ಕೊನೆಗೂ ತಿಳಿಯಾಗುತ್ತಿದೆ, ಈ ನೆಲದಲ್ಲಿ ಜನ ಸಹಜವಾಗಿ ಉಸಿರಾಡಲು, ಬಂಧುಗಳಂತೆ ಮತ್ತೆ ಬದುಕಲು ಸಾಧ್ಯ ಎಂಬ ನಿರೀಕ್ಷೆ ಮೂಡಿಸಿದೆ. ರಾಷ್ಟ್ರೀಯ ಪ್ರಚಾರ ಸಮಿತಿ ರಚಿಸಿ ಜನಸಾಮಾನ್ಯರ ಮನದಲ್ಲಿ ಕೋಮುವಾದಿಗಳು ಬಿತ್ತಿದ ವಿಷ ಬೀಜಗಳನ್ನು ಕಿತ್ತೆಸೆದು ಅವರ ಸಹಜ ಜಾತ್ಯತೀತ ಗುಣಗಳನ್ನು ನೆನಪಿಸಿಕೊಡುವ, ಕೋಮು ಸೌಹಾರ್ದದ, ದೇಶದ ಐಕ್ಯತೆಯ ಪರಪಂಪರೆಯನ್ನು ನೆನಪಿಸುವ ಕೆಲಸ ಎಲ್ಲೆಡೆ ನಡೆಸಬೇಕೆಂಬ ಸಮಾವೇಶದ ಕರೆ ಕೋಮು ವಾದಿಗಳಿಗೆ ದೇಶದ ಎಲ್ಲಾ ಜಾತ್ಯತೀತ ಶಕ್ತಿಗಳ ಮೊತ್ತಮೊದಲು ಒಗ್ಗಟ್ಟಿನಿಂದ ಒಡ್ಡಿದ ಪಂಥಾಹ್ವಾನ ಎನ್ನಬಹುದು. ದೇಶದ ಎಡ ಪಕ್ಷಗಳು ನಿರಂತರವಾಗಿ, ಕೆಲ ವೊಮ್ಮೆ ಏಕಾಂಗಿಯಾಗಿ ನಡೆಸಿದ ಹೋರಾಟ ಈಗ ತನ್ನ ಹರಹನ್ನು ವಿಸ್ತರಿಸಿಕೊಳ್ಳುವಲ್ಲಿ ಯಶಸ್ವಿ ಯಾಗಿದೆ. ಈ ಸಮಾವೇಶ ಕೂಡಾ ಎಡ ಪಕ್ಷಗಳ ನಿರಂತರ ಹೋರಾಟದ ಒಂದು ಫಲ ಎಂಬುದನ್ನು ಒಂದು ಗಮನಿಸಬೇಕು.

ಸಮಾವೇಶದ ಕಲಾಪಗಳನ್ನು ನಡೆಸಿ ಕೊಟ್ಟ ಅಧ್ಯಕ್ಷ ಮಂಡ ಳಿಯ ಸದಸ್ಯರಾಗಿ ತ್ರಿದೇಬ್ ಚೌಧರಿ, ಇಂದ್ರಜಿತ್ ಗುಪ್ತ (ಸಿ.ಪಿ.ಐ), ರಾಮಧನ್ (ಜನ ಮೋರ್ಚಾ), ಮೊಹಸಿನಾ ಕಿದ್ವಾಯಿ (ಕಾಂಗ್ರೆಸ್ - ಐ), ಸುರೇಂದ್ರ ಮೋಹನ್ (ಜನತಾದಳ) ಮತ್ತು ಸುರ್ಜಿತ್, ವೇದಿಕೆಯ ಮೇಲೆ ಆಸೀನರಾಗಿದ್ದ ಇ.ಎಂ.ಎಸ್., ಚಂದ್ರ ಶೇಖರ್, ಸಮರ್ ಮುಖರ್ಜಿ,ಎಂ ಫಾರುಕಿ, ಮುಲಾಯಂ ಸಿಂಗ್ ಯಾದವ್, ಯಶ ವಂತ ಸಿನ್ಹಾ, ಚಿತ್ತ ಬಸು, ಮಿರ್ ಕಾಸಿಂ, ದಿನೇಶ್ ಸಿಂಗ್, ಮಾರ್ಗರೇಟ್ ಆಳ್ವ, ಬಲರಾಂ ಝಾಕಡ್, ನ್ಯಾಯ ಮೂರ್ತಿ ಕೃಷ್ಣ ಅಯ್ಯರ್, ಪ್ರೊ.ಮುನಿಸ್ ಝಾ, ಕಲಾವಿದ ಕೃಷ್ಣ ಖನ್ನಾ, ಕವಿ ಗುಲಾಮ್ ರಬ್ಬಾನಿ ತಬಾನ್, ಇತಿಹಾಸಕಾರ ಡಾ. ಗೋಪಾಲ್ ಸಿಂಗ್, ಪತ್ರಕರ್ತರಾದ ಶಹೀದ್ ಸಿದ್ದಿಕಿ ಮತ್ತು ಮೃಣಾಲ್ ಪಾಂಡೆ, ಅಧ್ಯಾಪಕ ಸಂಘದ ಎಂ.ಪಿ. ಸಿಂಗ್, ಜಾಮಿಯಾ ಮಿಲಿಯಾದ ಉಪಕುಲಪತಿ ಡಾ. ಝುಹೂರ್ ಕಾಸಿಮ್, ಸ್ವರ್ಣಸಿಂಗ್ ಮತ್ತಿತರ ಪ್ರಖ್ಯಾತರು ದೇಶದ ಪ್ರಗತಿಪರ ದೇಶಪ್ರೇಮೀ ಜನತೆಯ ಆಕಾಂಕ್ಷೆ ಗಳನ್ನು ಪ್ರತಿಬಿಂಬಿಸುವಂತೆ ಕಾಣುತ್ತಿತ್ತು.

ಉತ್ತರಪ್ರದೇಶ ಮುಖ್ಯಮಂತ್ರಿ ಮುಲಾಯಂ ಸಿಂಗ್‌ಯಾದವ್ ಜೂನ್ ತಿಂಗಳಲ್ಲಿ ವಿವಾದಗ್ರಸ್ತ ಪ್ರದೇಶದಲ್ಲಿ ದೇವಸ್ಥಾನ ಕಟ್ಟಲು ಪ್ರಯತ್ನಿಸುವವರಿಗೆ. ದ್ವಾರಕೆಯ ಶಂಕರಾಚಾರ್ಯರಿಗೆ ಸಂದ ಮರ್ಯಾದೆಯೇ ದೊರೆಯಲಿದೆ ಎಂದು ಖಂಡತುಂಡಾಗಿ ಹೇಳುತ್ತಾ ಸಹಿಸಿದ್ದು ಇನ್ನು ಸಾಕು ಎಂಬ ದೇಶದ ಜಾತ್ಯತೀತ ಶಕ್ತಿಗಳ

ಪುಟ 6 ಕ್ಕೆ

ಮಹಿಳೆಯರಿಗೆ ಜಾತ್ಯತೀತತೆ ಬಹಳ ಮುಖ್ಯ ಏಕೆಂದರೆ ಧರ್ಮವನ್ನು ಆಧರಿಸಿದ ಪ್ರಭುತ್ವದಲ್ಲಿ ಮಹಿಳೆಯರಿಗೆ ಸಮಾನ ಸ್ಥಾನಮಾನ ದಕ್ಕುವು ದಿಲ್ಲ. ಸತಿ ಇದಕ್ಕೊಂದು ಉದಾಹರಣೆ.

-ಮೃಣಾಲ್ ಪಾಂಡೆ

ಇನ್ನೂರು ವರ್ಷಗಳ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದಲ್ಲಿ ನಾವು ರೂಪಿಸಿಕೊಂಡು, ಅಂಗೀಕರಿಸಿದ ನೀತಿಗಳ ವಿರುದ್ಧ ಕೋಮುವಾದಿಗಳು ಹೋರಾಟ ನಡೆಸಿದ್ದಾರೆ!

-ಶಾಹಿದ್ ಸಿದ್ದಿಕಿ.

ಜನರು ಕೋಮುವಾದಿಗಳಲ್ಲ. ಅವರು ಅಶಿಕ್ಷಿತರು ಆದ್ದರಿಂದ ಧರ್ಮದ ಹೆಸರಿನಲ್ಲಿ ಸುಲಭವಾಗಿ ಅವರನ್ನು ಮರುಳುಮಾಡಬಹುದು. ದೇಶವನ್ನು ರಕ್ಷಿಸಲು ಹಳ್ಳಿ-ಹಳ್ಳಿಗೆ ಜಾತ್ಯತೀತತೆಯ ಸಂದೇಶ ತಲುಪಬೇಕು.

-ಗುಲಾಮ್ ರಬ್ಬಾನಿ ತಬಾನ್.

ಜಾತ್ಯತೀತತೆ ಜನರ ಹೃದಯಗಳಲ್ಲಿದೆ. ವಿಘಟನೆ. ಪ್ರತ್ಯೇಕತಾವಾದದ ಮೂಲ ಆರ್ಥಿಕ ಅಸಮಾನತೆ.

-ಡಾ. ಗೋಪಾಲ್‌ಸಿಂಗ್

ಸಮಾವೇಶದ ನಿರ್ಣಯವನ್ನು ದೆಹಲಿಯ ಮನೆ-ಮನೆಗೆ ಒಯ್ಯುತ್ತೇವೆ

-ಎಂ.ಪಿ. ಸಿಂಗ್

(ದೆಹಲಿ ವಿ.ವಿ. ಅಧ್ಯಾಪಕರ ಸಂಘದ ಅಧ್ಯಕ್ಷ)

ಮತ್ತೆ ಮತ್ತೆ ಕೋಮು ದಂಗೆಗಳನ್ನು ನಾವು ಕಾಣುತ್ತಿರುವುದು ನಾಚಿಕೆಗೇಡು

-ಪ್ರೊ.ಸತೀಶ್ ಚಂದ್ರ

ನಮ್ಮ ಜಾತ್ಯತೀತ ವ್ಯವಸ್ಥೆಯಲ್ಲಿ ಎಂದೋ ಏನೋ ತಪ್ಪಿದೆ. ಸಾಮಾನ್ಯವಾಗಿ ನಮ್ಮ ಜನ ಕೋಮುವಾದಿಗಳಲ್ಲ. ಆದರೆ ಚುನಾವಣೆಯ ಸಮಯದಲ್ಲಿ ಧಾರ್ಮಿಕ, ಕೋಮು ಪ್ರಶ್ನೆಗಳನ್ನೆಬ್ಬಿಸಿ ಜನರನ್ನು ದಾರಿತಪ್ಪಿಸಲಾಗುತ್ತದೆ.

ಪ್ರೊ. ಝುಹೂರ್ ಕಾಸಿಂ

(ಜಾಮಿಯಾ ಮಿಲಿಯಾದ ಉಪಕುಲಪತಿ)

ಪಕ್ಷದ ಸಾಹಿತ್ಯ ಪ್ರಸಾರ ಅದೊಂದು ಸೈದ್ಧಾಂತಿಕ ಸಮರ

ಪಕ್ಷದ ಪತ್ರಿಕೆಗಳಿಗೆ ಚಂದಾ, ಮಾಡಿಸುವುದು, ಅವುಗಳ ಪ್ರಸಾರವನ್ನು ಹೆಚ್ಚಿಸುವುದು ಮತ್ತು ಸಾಹಿತ್ಯ ಮಾರಾಟ ವನ್ನು ವ್ಯಾಪಕಗೊಳಿಸಬೇಕೆಂದು ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯ ದರ್ಶಿ ಕಾಂ. ಜೋಷಿಯವರು 1945 ರ ಫೆಬ್ರವರಿಯ 'ಪೀಪಲ್ಸ್ ವಾರ್' ಪತ್ರಿಕೆಯಲ್ಲಿ ಕರೆ ನೀಡಿದರು. 'ಪೂರ್ಣ ಸ್ವಾತಂತ್ರ್ಯ'ದ ಹೋರಾಟದ ಸಂದರ್ಭದಲ್ಲಿ ಪಕ್ಷವು ಬಹಿರಂಗ ಸಭೆಗಳನ್ನು, ಸಾಹಿತ್ಯ ವಿತರಣೆಯ ಕಾರ್ಯಕ್ರಮವನ್ನೂ ದೇಶಾ ದಾದ್ಯಂತ ನಡೆಸುತ್ತಿತ್ತು. ಕಮ್ಯುನಿಸ್ಟ್ ವಿರೋಧದ ಸುಳ್ಳು ಪ್ರಚಾರಕ್ಕೆ ಪ್ರತ್ಯುತ್ತರ ಕೊಡಬೇಕಾದರೆ ಪ್ರೂರೋಗಾಮಿ ಜನತೆ ಯನ್ನೂ, ಬುದ್ಧಿ ಜೀವಿಗಳು ಹಾಗೂ ದೇಶಾಭಿಮಾನಿಗಳನ್ನು ತಲುಪಿ ಪಕ್ಷದ ಧೋರಣೆಯನ್ನು ವಿವರಿಸಬೇಕು. ಒಂದು ಇದರ ಮುಖ್ಯ ಉದ್ದೇಶವಾಗಿತ್ತು. ಇದನ್ನು ಒಂದು ದೊಡ್ಡ ಚಳುವಳಿಯನ್ನಾಗಿ ಕೊಂಡೊಯ್ಯಬೇಕೆಂದು ನಿರ್ಧರಿಸ ಯಾಗಿತ್ತು.

ಇದರ ಜಾರಿಗಾಗಿ ಎರಡು ವಿಧಾನ ಗಳನ್ನು ರೂಪಿಸಲಾಯಿತು. 1. 'ಪೀಪಲ್ ವಾರ್' ಪತ್ರಿಕೆಗೆ ಚಂದಾ. ಅದರ ಜೊತೆಯಲ್ಲಿಯೇ ಪಕ್ಷದ ರಾಜ್ಯ ಪತ್ರಿಕೆಗೆ ಚಂದಾ ಮಾಡಿಸುವುದು. 2. ಇಂಗ್ಲೀಷ್ ಮತ್ತು ಸ್ಥಳೀಯ ಭಾಷೆ ಗಳಲ್ಲಿನ ಸಾಹಿತ್ಯ ಮಾರಾಟಮಾಡುವುದು.

ಇದು ಯಶಸ್ವಿಯಾಗಬೇಕಾದರೆ ಪಕ್ಷದ ಎಲ್ಲಾ ಸದಸ್ಯರು ಕಾರ್ಯಕರ್ತರು ಅವಿರತವಾಗಿ ಶ್ರಮಿಸಲೇ ಬೇಕಿದ್ದಿತು.

ಇವುಗಳ ಯಶಸ್ವಿ ಜಾರಿಗೆ ಉತ್ತಮ ವಾಗಿ ಶ್ರಮಿಸಿದವರಿಗೆ ಪ್ರೋತ್ಸಾಹಕರವಾದ ಕಾಣಿಕೆಗಳನ್ನು ನೀಡಿ ಅಭಿನಂದಿಸುವುದಾಗಿ ಪ್ರಕಟಸಲಾಯಿತು.

ಗ್ರಾಮಾಂತರದಲ್ಲಿ 25 ಪ್ರತಿಗಳು ಮತ್ತು ಪಟ್ಟಣದಲ್ಲಿ 50 ಪ್ರತಿಗಳನ್ನು ಒಂದು ವರ್ಷಕ್ಕೆ ಚಂದಾ ಮಡಿಸಿದವರಿಗೆ ಅವರ ಹೆಸರನ್ನು ಪ್ರಕಟಿಸುವುದು ಹಾಗೂ ಪಾರ್ಟಿಯ ಕಾರ್ಡಿನಲ್ಲಿ ಇದನ್ನು ದಾಖಲಾಗಿಸುವುದು 1 ವರ್ಷಕ್ಕೆ ಪತ್ರಿಕೆ ಉಚಿತ ವಾಗಿ ಕೊಡುವುದು.

ರಾಜ್ಯದಲ್ಲಿ ಪತ್ರಿಕೆಗಳಿಗೆ 100 ಚಂದಾ ಮಾಡಿಸುವವರಿಗೆ ಪಾರ್ಟಿ ಕಾರ್ಡಿನಲ್ಲಿ ಬರೆಯುವುದು ಮತ್ತು ಒಂದು ಸೆಟ್ ಪುಸ್ತಕಗಳನ್ನೂ ನೀಡುವುದು.

ರಾಜ್ಯದಲ್ಲಿ 200 ಚಂದಾ ಮಾಡಿಸಿದ ಜಿಲ್ಲಾ ಸಮಿತಿಗಳಿಗೆ ಸಂಗಾತಿ ಡಾ॥ ಅಧಿಕಾರಿಯವರು ಸಹಿ ಮಾಡಿದ ಫೋಟೋ ಕೊಡುವುದು.

ಭಾರತದಲ್ಲಿ ಅತೀ ಹೆಚ್ಚು ಪುಸ್ತಕಗಳ ಮಾರಾಟ ಮಾಡಿದವರಿಗೆ ಲೆನಿನ್ ಅವರ 'ಸೆಲೆಕ್ಟೆಡ್ ವರ್ಕ್ಸ್' ಗ್ರಂಥಗಳನ್ನು ಕೊಡುವುದು.

ಮೇ ದಿನಾಚರಣೆಯ ಹೊತ್ತಿಗೆ ಈ ಕಾರ್ಯಕ್ರಮವು ಅತ್ಯದ್ಭುತವಾಗಿ ಯಶಸ್ವಿ ಯಾಯಿತೆಂದು ಬೇರೆ ಹೇಳಬೇಕಾಗಿಲ್ಲ.

– ಇ.ಕೆ.ಎನ್. ರಾಜನ್

– ಎಸ್. ವೈ. ಗುರುಶಾಂತ್



ಗಮನಿಸಿ! ಗಮನಿಸಿ!!

ನಿಮ್ಮ ಪತ್ರಿಕೆ "ಐಕ್ಯರಂಗ"ದಲ್ಲಿ ಹೊಸ ಶೀರ್ಷಿಕೆಗಳು ಓದುಗರಿಗೆ ವಿಪುಲ ಅವಕಾಶ ನೀಡುವ ಪುಟಗಳು. ಎಲ್ಲಾ ಸಂಗಾತಿಗಳೂ ಉತ್ಸಾಹದಿಂದ ಪಾಲ್ಗೊಳ್ಳುವ ಅವಕಾಶ.

"ಕಮ್ಯುನಿಸ್ಟ್ ಚಳುವಳಿ ನನ್ನನ್ನು ಸೆಳೆದ ಬಗೆ"

ದೇಶವನ್ನು ಕ್ರಾಂತಿಯತ್ತ ನಡೆಸುವ ಮಹತ್ವದ ಕೆಲಸಕ್ಕಾಗಿ ನಮ್ಮ ಸಂಗಾತಿಗಳು ಕಮ್ಯುನಿಸ್ಟ್ ಚಳುವಳಿಯತ್ತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದತ್ತ ಸೆಳೆಯಲ್ಪಟ್ಟಿದ್ದಾರೆ. ಒಬ್ಬೊಬ್ಬ ಸಂಗಾತಿಗಳದು ಒಂದೊಂದು ವಿಶಿಷ್ಟ ಅನುಭವ. ನೀವು ಕಮ್ಯುನಿಸ್ಟ್ ಚಳುವಳಿಯತ್ತ ಹಾಕಿದ ಹೆಜ್ಜೆಯನ್ನು 2/3 ಪುಟಗಳಲ್ಲಿ ಆಕರ್ಷಕವಾಗಿ ಬರೆದು ಕಳುಹಿಸಿ.

ಉತ್ತಮವಾದುದನ್ನು ಆರಿಸಿ ಪ್ರಕಟಿಸಲಾಗುತ್ತದೆ.

ಕೊಡುಗೆ: ಬರೆಯಲು ಸಾಧ್ಯವಿಲ್ಲದ ಹಿರಿಯ-ಕಿರಿಯ ಸಂಗಾತಿಗಳ ರೋಚಕ ಅನುಭವವನ್ನು ಬರೆಯಬಲ್ಲ ಸಂಗಾತಿಗಳು ಬರೆದು ಕಳುಹಿಸಬಹುದು. ಈ ವಿಶೇಷ ಪ್ರಯತ್ನಕ್ಕಾಗಿ ಬರೆದು ಕಳುಹಿಸಿದ ಸಂಗಾತಿಗಳಿಗೆ 3 ತಿಂಗಳ/6 ತಿಂಗಳ ಐಕ್ಯರಂಗ ಉಚಿತ.

"ನನ್ನ ಮನ ಮುಟ್ಟಿದ ಘಟನೆ"

ನಮ್ಮ ಕಣ್ಣ ಮುಂದೆಯೇ ಅನೇಕ ಘಟನೆಗಳು ಕ್ರಾಂತಿಕಾರಿಗಳಾದ ನಮ್ಮ ಮನಸ್ಸನ್ನು ಕಲಕುವ, ಮನ ಮುಟ್ಟುವ, ನಮ್ಮ ಚಳುವಳಿಯಲ್ಲಿ ನೆಚ್ಚಿಗೆ ಮೂಡಿಸುವ ಘಟನೆಗಳು- ಕಾರ್ಮಿಕರ ರೈತರ ಸಾಮಾನ್ಯ ಜನರ ವೀರಾವೇಶದ ಕೃತ್ಯಗಳು - ಹೋರಾಟಗಳಲ್ಲಿ, ಹೋರಾಟಗಳ ಸೋಲಿನಲ್ಲಿ, ದಿನನಿತ್ಯದ ಬದುಕಿನಲ್ಲಿ ನಡೆಯುತ್ತಿರುತ್ತವೆ. ನಿಮ್ಮ ಮನಸ್ಸಿಗೆ ತಾಕಿದ ಘಟನೆ 'ಐಕ್ಯರಂಗ' ಓದುಗರಲ್ಲಿನ ಮನಸ್ಸಿಗೆ ಮುಟ್ಟಲು ಒಂದರಿಂದ ಎರಡು ಪುಟಗಳಲ್ಲಿ ಆಕರ್ಷಕವಾಗಿ ಬರೆದು ಕಳುಹಿಸಿ.

'ಐಕ್ಯರಂಗ' ಪ್ರಶ್ನೋತ್ತರ ವಿಭಾಗ

ನಮ್ಮ ಸಂಗಾತಿಗಳಿಗೆ ಹಲವಾರು ಪ್ರಶ್ನೆಗಳು ಎದುರಾಗುತ್ತಿರುತ್ತವೆ.

ಈ ಪ್ರಶ್ನೆಗಳಲ್ಲಿ ಹಲವು ವಿಧ. ವಿಶ್ವದಲ್ಲಿ ಎಷ್ಟು ಕಮ್ಯುನಿಸ್ಟ್ ದೇಶಗಳಿವೆ? ಅವು ಯಾವುವು? ವಿಯತ್ನಾಂನಲ್ಲಿ ಕ್ರಾಂತಿ ಯಾವಾಗ ನಡೆಯಿತು? ಎಂಬ ಮಾಹಿತಿಯನ್ನು ಬಯಸುವ ಪ್ರಶ್ನೆಗಳು. ಚಿಕ್ಕ ಉತ್ತರಗಳನ್ನು ಬಯಸುವ ಚಿಕ್ಕ ಪ್ರಶ್ನೆಗಳು. ಈ ಪ್ರಶ್ನೆಗಳನ್ನು "ಐಕ್ಯರಂಗ ಪ್ರಶ್ನೋತ್ತರ ವಿಭಾಗಕ್ಕೆ ಕಳುಹಿಸಿ ಅಂಚೆ ಕಾರ್ಡಿನಲ್ಲಿ "ಐಕ್ಯರಂಗ" ಪ್ರಶ್ನೋತ್ತರ ವಿಭಾಗ" ಎಂದು ಸ್ಪಷ್ಟವಾಗಿ ನಮೂದಿಸಿ.

ಕಾಂ. ಇ.ಎಂ.ಎಸ್. ಪ್ರಶ್ನೋತ್ತರ

ರಾಷ್ಟ್ರೀಯ, ಅಂತರರಾಷ್ಟ್ರೀಯ ಸೈದ್ಧಾಂತಿಕ, ರಾಜಕೀಯ ಪ್ರಶ್ನೆಗಳಿಗೆ ಕಾಂ. ಇ.ಎಂ.ಎಸ್. ಉತ್ತರಿಸಲೊಪ್ಪಿದ್ದಾರೆಂದು ಈಗಾಗಲೇ ಪ್ರಕಟಿಸಿದ್ದೇವೆ. ಪಕ್ಷದ ಪ್ರಧಾನ ಕಾರ್ಯದರ್ಶಿಯವರಿಂದಲೇ ಉತ್ತರಗಳನ್ನು ಪಡೆಯಬಹುದಾದ ಈ ಸುವರ್ಣಾವಕಾಶವನ್ನು ಸಂಗಾತಿಗಳು ಸದುಪಯೋಗಪಡಿಸಿಕೊಳ್ಳಬೇಕು. ಕಾಂ. "ಇ.ಎಂ.ಎಸ್. ಪ್ರಶ್ನೋತ್ತರ ವಿಭಾಗ" ಎಂದು ಸ್ಪಷ್ಟವಾಗಿ ನಮೂದಿಸಿ.

ಗಮನಿಸಿ ಈ ಎಲ್ಲಾ ಕಾಲಂಗಳು ಜುಲೈ ಒಂದರಿಂದ ಪ್ರಾರಂಭ ಸಂಗಾತಿಗಳೇ ತ್ವರೆ ಮಾಡಿ.

ಸಂಕ್ಷಿಪ್ತ ಸುದ್ದಿಗಳು

ಆಂಧ್ರ ಚಂಡಮಾರುತ: ಪರಿಹಾರ ಸಂಗ್ರಹ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (DYFI) ಕುಂದಾಪುರ ತಾಲ್ಲೂಕು ಸಮಿತಿ ನೇತೃತ್ವದಲ್ಲಿ 30-5-90 ರಂದು- ಕುಂದಾಪುರಪೇಟೆಯಲ್ಲಿ ಆಂಧ್ರಪ್ರದೇಶದ ಚಂಡಮಾರುತ ಪೀಡಿತ ಜನರ ನೆರವಿಗಾಗಿ ನಿಧಿ ಸಂಗ್ರಹಿಸಲಾಯಿತು. ಸುಮಾರು 831-60ರೂ ಅನ್ನು ಸಂಗ್ರಹಿಸಲು ನೆರವಿತ್ತ ಎಲ್ಲಾ ಜನರಿಗೂ ತಾಲ್ಲೂಕು ಸಮಿತಿ ಕೃತಜ್ಞತೆ ಸಲ್ಲಿಸಿ, ಸಂಗ್ರಹಿಸಿದ ಹಣವನ್ನು ಪರಿಹಾರ ನಿಧಿಗೆ ಕಳುಹಿಸಲಾಯಿತು.

ರೈತರ ಸಾಲಮನ್ನಾ-ಧರಣಿ ಸತ್ಯಾಗ್ರಹ

ಕರ್ನಾಟಕ ಪ್ರಾಂತ ರೈತ ಸಂಘದ ಸವದತ್ತಿ ಶಾಖೆಯಿಂದ ದಿನಾಂಕ 22-5-90 ರಂದು ಸವದತ್ತಿ ಡಿಸಿಸಿ ಬ್ಯಾಂಕ್ ಎದುರು ಸಹಕಾರಿ ಸಂಘದ ಸಾಲಗಾರರ ಸಾಲಮನ್ನಾ ಕುರಿತು ಧರಣಿ ಸತ್ಯಾಗ್ರಹ ಆರಂಭಿಸಲಾಯಿತು. ಈ ಧರಣಿ ಸತ್ಯಾಗ್ರಹವನ್ನು ಉದ್ದೇಶಿಸಿ, ಎಸ್. ಅಪ್ಪಣ್ಣ, ಎಸ್.ಎಸ್.ಸಾಂಡಸ್, ಜಿ.ಜಿ. ಹೋರಗಲ್ಲ ಇವರು ಮಾತನಾಡಿ ರೈತರ ಸಾಲಮನ್ನಾವನ್ನು ಶೀಘ್ರವಾಗಿ ಮನ್ನಾಮಾಡಬೇಕೆಂದು ಆಗ್ರಹ ಪಡಿಸಿದರು.

ಯಶಸ್ವಿ ಧರಣಿ ಸತ್ಯಾಗ್ರಹ

ಬಳ್ಳಾರಿ ಜಿಲ್ಲಾ ಅರಣ್ಯ ಇಲಾಖೆ ದಿನ [illegible]

ಸಂರಕ್ಷಣಾಧಿಕಾರಿಗಳ ಕಾರ್ಯಾಲಯದ ಮುಂದೆ ಯಶಸ್ವಿಯಾಗಿ ಧರಣಿ ಸತ್ಯಾಗ್ರಹವನ್ನು ಮಾಡಲಾಯಿತು ಪ್ರತಿತಿಂಗಳು 5 ನೇ ತಾರೀಖಿನಂದು ಸಂಬಳ ವಿತರಣೆ, ಕೆಲಸದಿಂದ ತೆಗೆದು ಹಾಕುವುದನ್ನು ನಿಲ್ಲಿಸಲು, ತೆಗೆದು ಹಾಕಿರುವ ನೌಕರರನ್ನು ಮರಳಿ ಕೆಲಸಕ್ಕೆ ತೆಗೆದುಕೊಳ್ಳಲು, ಕನಿಷ್ಟ ವೇತನ ನೀಡಲು, ದಿನಗೂಲಿ ನೌಕರರನ್ನು ಖಾಯಂ ಗೊಳಿಸುವ ಬೇಡಿಕೆಗಳನ್ನು ಮುಂದಿಟ್ಟು ನಡೆದ ಈ ಮುಷ್ಕರ ಯಶಸ್ವಿಯಾಗಿ ನಡೆಯಿತು. ಜಿಲ್ಲಾಧಿಕಾರಿಗಳು, ಉಪಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಈ ಬೇಡಿಕೆಗಳನ್ನು ತಿಳಿಸಿದ್ದರೂ, ಅವರು ಯಾವುದೇ ಕ್ರಮವಹಿಸದೇ ಇದ್ದುದರಿಂದ ಅನಿವಾರ್ಯವಾಗಿ ಮುಷ್ಕರವನ್ನು ನಡೆಸಲಾಯಿತು. 16-5-90 ಹಾಗೂ 21-5-90 ರಂದು ಉಪಅರಣ್ಯ ಸಂರಕ್ಷಣಾಧಿಕಾರಿಗಳಿಂದ ಶ್ರೀ. ಶಿವನಗೌಡ ಮತ್ತು ಕನ್ವರ್‌ಪಾಲ್ ಇವರು ಸಂಘದ ಅಧ್ಯಕ್ಷರಾದ ಶ್ರೀ ರಘುನಾಥ, ಉಪಾಧ್ಯಕ್ಷರಾದ ಶ್ರೀ ಸಿದ್ದಪ್ಪ, ಸಿಐಟಿಯು ಮುಖಂಡ ಎಸ್. ಪ್ರಸನ್ನ ಕುಮಾರ್ ಮುಂತಾದವರೊಂದಿಗೆ ಚರ್ಚಿಸಿ, ಕೆಲವು ಬೇಡಿಕೆಗಳನ್ನು ಈಡೇರಿಸಲು ಒಪ್ಪಿ ಕೊಂಡರು. ಇನ್ನು ಕೆಲವು ಬೇಡಿಕೆಗಳನ್ನು ಪರಿಶೀಲಿಸುವುದಾಗಿ ಆಶ್ವಾಸನೆ ನೀಡಿ, ದಿನಗೂಲಿ ನೌಕರರನ್ನು ಖಾಯಂಗೊಳಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಒಪ್ಪಿದ್ದಾರೆ.

ರಸ್ತೆ ದುರಸ್ತಿ ಪಡಿಸಲು ರಸ್ತೆ ತಡೆ ಚಳುವಳಿ

ಮಂಗಳೂರು ನಗರ ಪಾಲಿಕೆಗೆ ಒಳ [illegible]

ಆಳುವವರಿಂದ ನಿರ್ಲಕ್ಷ್ಯಕ್ಕೊಳಗಾಗಿರುವ ಕಡಲಕೊರೆತ

ಉತ್ತರ ಕನ್ನಡದ ಕರಾವಳಿಯಗುಂಟವಿರುವ ಹಳ್ಳಿಗಳು ಕಳೆದ ಹಲವು ವರ್ಷದಿಂದ ಅನುಭವಿಸುತ್ತ ಬಂದಿರುವ ಕೊರೆತದ ತೊಂದರೆ ಇದೀಗ ಭೀಕರ ರೂಪಪಡೆದಿದೆ. ಕಡಲದಂಡೆಯಲ್ಲಿ ಅವೈಜ್ಞಾನಿಕವಾಗಿ ರಚಿಸಿರುವ ಹಲವು ಬಂದರು-ಇತರ ಕೆಲವು ಬೀಚ್, ಕಟ್ಟಡಗಳ ದೆಸೆಯಿಂದ ಈ ರೀತಿಯ ಕೊರೆತ ಅರಂಭವಾಗಿದೆ ಎಂದು ಹೇಳಲಾಗುತ್ತಿದೆ. ಉತ್ತರ ಕನ್ನಡದಲ್ಲಿ ಪ್ರಮುಖವಾಗಿ ದೇವ್‌ಭಾಗ್, ಕೋಡಿಬಾಗ್, ಮಂಜಗುಣಿ, ವನಹಳ್ಳಿಮಠ, ಧಾರೇಶ್ವರ್, ಗೋಕರ್ಣ, ಪಾವಿನಕುವನ, ಮಾವಿನ ಕುರ್ವ ತೆಂಗಿನ ಗುಂಟೆ, ಬೈಲೂರು. ಮಾವಳ್ಳಿ, ಹೊನ್ನಗದ್ದೆ ಮುಂತಾದ 14 ಸ್ಥಳಗಳು ತೀವ್ರ ತೊಂದರೆಗೊಳಗಾಗಿವೆ.

ಈ ರೀತಿ ಕಡಲು ಕೊರೆತಕ್ಕೊಳಗಾಗಿರುವ ಪ್ರದೇಶಗಳಲ್ಲಿ ಬಹುಪಾಲು ನಾಗರೀಕ ಸಮಾಜದಿಂದ ನಿರ್ಲಕ್ಷ್ಯಕ್ಕೊಳಗಾದ ಹಳ್ಳಿಗಳೇ ಹೆಚ್ಚು. ಆ ಪ್ರದೇಶದಲ್ಲಿ ಒಂದು ಒಳ್ಳೆಯ ಶಾಲೆ ಇರಲಿ. ಸರಿಯಾದ ಅವಶ್ಯಕ ವಸ್ತುಮಾರಾಟದ ಅಂಗಡಿ ಕೂಡಾ ಇಲ್ಲ ಎಂದು ಹೇಳಬಹುದು. ಮಳೆಗಾಲದ ದಿನಗಳಲ್ಲಿ ಸಂಪೂರ್ಣವಾಗಿ ಭೀತಿಯ ಮಡುವಲ್ಲಿ ತುಂಬಿರುವ ಈ ಪ್ರದೇಶಗಳ ಬಡ ಕುಟುಂಬಗಳು,ನಿದ್ರೆ ಇಲ್ಲದೇ ಕಡಲನ್ನು ಕಾಯುತ್ತಾ ಕಳೆಯುವ ಸ್ಥಿತಿ ಇರುತ್ತದೆ. ಬಹುಮಟ್ಟಿಗೆ ಮೀನುಗಾರಿಕೆಯನ್ನು, ಕೆಲವು ಕೃಷಿಯನ್ನು ನಂಬಿರುವ ಬಡ ಕುಟುಂಬಗಳಿರುವ ಈಹಳ್ಳಿಯ ಜನರು ದಿನ ದುಡಿದರೆ ಮಾತ್ರ ಗಂಜಿ ಪಡೆಯುವಂತಹ ಬಡತನದಲ್ಲಿರುವವರು.

ಎಸ್.ಎಫ್.ಐ. ಹೋರಾಟ

ಕಳೆದ ವರ್ಷ ಎಸ್.ಎಫ್.ಐ. ಹೊನ್ನಾವರ ಘಟಕವು ಹೊನ್ನಾವರ ತಾಲೂಕಿನ



ನಿಂದ ವೀರನಗರದವರೆಗೆ ರಸ್ತೆ ಸಂಚಾರಕ್ಕೆ ಯೋಗ್ಯವಾಗಿಲ್ಲದೆ ಇದ್ದುದರಿಂದ, ಹಾಗೂ ಕಳೆದ 5 ವರ್ಷದಿಂದ ನಗರ ಪಾಲಿಕೆಯ ಈ ದಿವ್ಯ ನಿರ್ಲಕ್ಷ್ಯವನ್ನು ಪ್ರತಿಭಟಿಸಿ ತಾ। 25-5-90 ರಂದು ಪಕ್ಕಲಡ್ಕ ಡಿವೈಎಫ್ಐ ಘಟಕದ ನೇತೃತ್ವದಲ್ಲಿ ರಸ್ತೆ ದುರಸ್ತಿ ಪಡಿಸುವಂತೆ ಒತ್ತಾಯಿಸಿ ರಸ್ತೆ ತಡೆ ಕಾರ್ಯಕ್ರಮವನ್ನು ನಡೆಸಲಾಯಿತು.

ನಂತರ ಪರಿಸ್ಥಿತಿಯ ಗಂಭೀರತೆಯನ್ನು ಅರಿತ ಮಂಗಳೂರು ಗ್ರಾಮಾಂತರ ಪೋಲೀಸ್ ಠಾಣೆಯ ಎಸ್.ಐ.ಮೋಹನ್ ಅವರು ನಗರಪಾಲಿಕೆ ಎಕ್ಸಿಕ್ಯುಟಿವ್ ಇಂಜಿನಿಯರ್ ಹಾಗೂ ಅಸಿಸ್ಟೆಂಟ್ ಇಂಜಿನಿಯರ್ ಅವರನ್ನು ಕರೆಸಿ ಪಂಚಾಯತಿ ನಡೆಸಿ, 8 ದಿವಸಗಳ ಒಳಗಾಗಿ ದುರಸ್ತಿ ಪಡಿಸುವ ಭರವಸೆಯನ್ನಿತ್ತರು.

ಈ ಚಳುವಳಿಯಲ್ಲಿ ಡಿವೈಎಫ್ಐ. ಪಕ್ಕಲಡ್ಕ ಘಟಕದ ಅಧ್ಯಕ್ಷರಾದ ಶ್ರೀಲೋಟರೆನ್ಸ್ ಡಿ ಸೋಜ, ಸತೀಶ್ ಅಂಜನ್, ಡಿವೈಎಫ್ಐ ಉಳ್ಳಾಲ ವಲಯದ ಕಾರ್ಯದರ್ಶಿ ಯಾದವಶೆಟ್ಟಿ ಮುಂತಾದವರು ಭಾಗವಹಿಸಿದ್ದರು.

ಸವದತ್ತಿಯಲ್ಲಿ ರಸ್ತೆ ತಡೆ ಚಳುವಳಿ

ಬಸ್ ದರ, ಅಂಚೆ, ತಂತಿ, ರೈಲ್ವೆ ಬೆಲೆ ಏರಿಕೆಯನ್ನು ವಿರೋಧಿಸಿ ಸವದತ್ತಿಯಲ್ಲಿ ಬಸ್ ತಡೆ ಚಳುವಳಿಯನ್ನು ತಾ। 16-5-90 ರಂದು ನಡೆಸಲಾಯಿತು. ಮಾನ್ಯ ತಹಶಿಲ್ದಾರರಿಗೆ ಮನವಿ ಪತ್ರವನ್ನು ಸಲ್ಲಿಸಲಾಯ್ತು. ಚಳುವಳಿ ನಡೆಸುತ್ತಿದ್ದ ಚಳುವಳಿಗಾರರನ್ನು ಪೋಲಿಸರು ಬಂಧಿಸಿ

ಕೆಸರಕೋಡಿ, ಹಾರಿಬಾಗಿಲ, ಪಾವಿನ ಕುರ್ವದ ನಾಗರಿಕರನ್ನು ಸಂಘಟಿಸಿ ನೂರಾರು ಜನರನ್ನು ಕೂಡಿಸಿ ಸುಮಾರು 6 ಕಿ. ಮೀ. ದೂರದವರೆಗೆ ಮೆರವಣಿಗೆಯ ಮೂಲಕ ಹೋಗಿ ತಹಶಿಲ್ದಾರರಿಗೆ ಮನವಿ ಅರ್ಪಿಸಿ ತಕ್ಷಣ ಮನೆ ಕಳೆದುಕೊಂಡವರಿಗೆ ಪರಿಹಾರ ಮತ್ತು ತಡೆಗೋಡೆಯ ರಚನೆಗಾಗಿ ಒತ್ತಾಯಿಸಿತು. ಊರಿನ ವೃದ್ಧರು, ಮಹಿಳೆಯರಿಂದ ಕೂಡಿದ ಈ ಮೆರವಣಿಗೆಯು ಹೊನ್ನಾವರದ ಇತಿಹಾಸದಲ್ಲೇ ವಿಶಿಷ್ಟ ರೀತಿಯಲ್ಲಿ ಜರುಗಿತು. ತಹಸಿಲ್ದಾರ್ ಆಫೀಸಿನ ಎದುರೇ ದೊಡ್ಡ ಸಭೆ ಕೂಡಾ ನಡೆಸಿತ್ತು. ಆ ತರುವಾಯ ಅಲ್ಲಿಗೆ ಜಿಲ್ಲಾಧಿಕಾರಿಗಳು ಭೇಟಿ ನೀಡಿ ಪರಿಹಾರ ಕೊಡಿಸುವ ಆಶ್ವಾಸನೆ ನೀಡಿ ಹೋಗಿದ್ದರು. ಆದರೆ ಇನ್ನೂ ಆ ಕೆಲಸ ನಡೆದಿಲ್ಲ ಎನ್ನುವುದೇ ವಿಷಾದದ ಸಂಗತಿಯಾಗಿದೆ.

ಸರಕಾರದ ಸಮಿತಿಗಳು ಪುಡಾರಿಗಳು

ಕಡಲ ಕೊರೆತದ ಅಧ್ಯಯನಕ್ಕಾಗಿ ನೇಮಿತವಾಗಿದ್ದ ಹಲವು ಸಮಿತಿಗಳು, ತಾಂತ್ರಿಕ ಪರಿಣಿತರ ಸಮಿತಿಗಳಿವೆಯಾದರೂ ಇವರ್‍ಯಾರ ವೀಕ್ಷಣೆ, ವರದಿಗಳು ಪ್ರಯೋಜನಕ್ಕೆ ಬಂದಂತಿಲ್ಲ. ಕಳೆದ ವರ್ಷ ಜೂನ್ ತಿಂಗಳಲ್ಲಿ ಕಡಲ ಕೊರೆತ ಮಂಡಳಿಯ ಸದಸ್ಯರು ಕಾರಿನಲ್ಲಿ ಪ್ರವಾಸ ಕೈಗೊಂಡಿದ್ದು ದೊಡ್ಡ ಸುದ್ದಿಯಾಯಿತೇ ವಿನಃ ಪ್ರಯೋಜನವೇನು ಆಗಿಲ್ಲ. ಈ ಅಧಿಕಾರಿಗಳ ದಂಡು ಕಾರಿನಲ್ಲಿ ಕುಳಿತು ತಾಲೂಕು ಪ್ರದೇಶಕ್ಕೆ ಬಂದು ಐ.ಬಿ. ಯಲ್ಲುಳಿದು ಮರಳಿದರು. ಈ ಕೆಲಸವನ್ನು ಕಾಂಗ್ರೆಸ್‌ನ ಕೆಲವು ಪುಡಾರಿಗಳು ಮುಕ್ತ ಕಂಠದಿಂದ ಹೊಗಳಿದರು. ಇದು ತಮ್ಮ ಪಕ್ಷದ ದೊಡ್ಡ "ಸಾಧನೆ"ಗಳಲ್ಲಿ ಸೇರಿಸಲೂ ಪ್ರಯತ್ನಿಸಿದರು. ಆದರೆ ಹೀಗೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡದ ಕುರಿತು ವಿಚಾರಿಸಿದಾಗ-"ಅವರು ದೊಡ್ಡ ಅಧಿಕಾರಿಗಳು. ಅವರಿಗೆ ಹಾಗೆ ತಿಳಿಯುತ್ತದೆ....." ಎಂಬ ಬುದ್ಧಿವಂತಿಕೆಯ ಉತ್ತರಕೊಟ್ಟರು. ಹೀಗೆ ಜನರ ನೋವಿನ, ದುಃಖದ ಮಧ್ಯೆ ಈ ಜನರ ಕ್ರೌರ್ಯದ ನಿರ್ಲಕ್ಷ್ಯದ ವರ್ತನೆಗಳು ಈ ಜನರನ್ನು ಮತ್ತಷ್ಟು ನೋವಿನ ಮಡುವಿಗೆ ದೂಡಿದೆ.

ಕೈಗೊಳ್ಳಬೇಕಿರುವ ಪರಿಹಾರ

ಈಗಾಗಲೇ ಕಡಲು ಕೊರೆತದಿಂದ ಹಲವು ಗ್ರಾಮಗಳ ನೂರಾರು ಕುಟುಂಬಗಳು ನಿರ್ಗತಿಕವಾಗಿವೆ. ಹಲವರು ಬೆಲೆ ಬಾಳುವ ಭೂಮಿ ಮರಗಿಡಗಳನ್ನು ಕಳೆದುಕೊಂಡಿದ್ದಾರೆ. ಇವರಿಗೆಲ್ಲ ತಕ್ಷಣ ಪರಿಹಾರ ನೀಡಬೇಕು. ಅವರ ಭೂಮಿ, ಮನೆಗೆ ತಕ್ಕ ಬೆಲೆಯಂತೆ ಪರಿಹಾರ ನಿಗದಿಪಡಿಸಿ ಅವರ ಮುಂದಿನ ಬದುಕಿಗೆ ಸಹಾಯಕವಾಗುವಂತೆ ಮಾಡಬೇಕು. ಅಲ್ಲದೆ ಕೊರೆತಕ್ಕೊಳಗಾಗುತ್ತಿರುವ ಗ್ರಾಮಗಳಿಗೆ ಕಡಲಗುಂಟ ತಡೆಗೋಡೆಯನ್ನು ಕೇರಳದ ಮಾದರಿಯಲ್ಲಿ ನಿರ್ಮಿಸುವುದಲ್ಲದೇ, ಕೆಲವು ಕ್ಷುಲ್ಲಕ ಹಿತಾಸಕ್ತಿಗಳು ನದಿಯನ್ನು ತುಂಬಿಕೊಂಡೋ ಕಡಲ ಕೆಲವು ಭಾಗ ತುಂಬಿಕೊಂಡೋ ಸ್ವಂತಕ್ಕಾಗಿ ಬಳಸಿಕೊಳ್ಳುವುದನ್ನು ತಡೆಯಬೇಕು. ದ್ವೀಪದೋಪಾದಿಯಲ್ಲಿ ನಾಗರೀಕ ಸಮಾಜದಿಂದ ದೂರವಾಗಿರುವ ಈ ಪ್ರದೇಶಗಳಿಗೆ ತಾಲೂಕು ಪ್ರದೇಶಕ್ಕೆ ಸಂಪರ್ಕ ಏರ್ಪಡಿಸುವಂತೆ ಸೇತುವೆ, ರಸ್ತೆ ನಿರ್ಮಿಸಿಕೊಟ್ಟು ಶಾಲೆ, ಆಸ್ಪತ್ರೆ ಮತ್ತು ನ್ಯಾಯ ಬೆಲೆ ಅಂಗಡಿ ಮುಂತಾದವುಗಳನ್ನು ರಚಿಸುವುದರ ಮೂಲಕ ಈ ಜನರಿಗೆ ಧೈರ್ಯ ನೀಡುವ ಕೆಲಸಮಾಡಬೇಕಾಗಿದೆ.

— ಸುರೇಶ.

ಸಾದರ ಸ್ವೀಕಾರ

ಸೈದ್ಧಾಂತಿಕ

★ ವೈಜ್ಞಾನಿಕ ಕಮ್ಯುನಿಸಂ ಎಂದರೆ ಏನು?
ಲೇಖಕರು: ಎಲ್.ಸೆಲ್‌ಜ್ನೋವ್
ವಿ. ಫೆತೀಸೋವ್

★ ಸಮಾಜವಾದ ಎಂದರೆ ಏನು?
ಲೇಖಕರು : ಡಿ. ಕ್ಲಿಮೆಂತ್ಯೆವ್
ಡಿ. ವಿಸೇಲ್ಯೆವ್

★ ಮಿಗುತಾಯ ಮೌಲ್ಯ ಎಂದರೆ ಏನು?
ಲೇಖಕರು: ಎಫ್ ಪ್ರೋಲ್ವೊವ್
ಬಿ. ಪ್ರೊರ್ಯೊವ್.

ಈ ಮೇಲಿನ ಪುಸ್ತಕಗಳ ಪ್ರಕಾಶಕರು: ಪ್ರಗತಿ ಪ್ರಕಾಶನ, ಮಾಸ್ಕೋ.

ಅಪೂರ್ವ ಕ್ರಾಂತಿಕಾರಿಗಳ ಕುರಿತು

★ ನೆಲ್ಸನ್ ಮಂಡೆಲಾ
ಲೇಖಕರು: ಬೋರಿಸ್ ಅಸೋಯನ್
ಅನುವಾದ : ಸಿ. ಸೀತಾರಾಮ್

★ ಅರ್ನೆಸ್ಟೊ ಚೆ ಗುವಾರ
ಲೇಖಕರು : ಐ. ಲಾವ್ರೆತ್‌ಸ್ಕಿ
ಅನುವಾದ: ಗೊ.ರೂ. ಚೆನ್ನಬಸಪ್ಪ.
ಸೂರ್ಯಕಾಂತ ಸೊನ್ನದ
ಕೆ.ಪಿ. ಸ್ವಾಮಿ

ಭಾರತದ ಕಮ್ಯುನಿಸ್ಟ್ ಚಳುವಳಿಯ ಆರಂಭದ ದಿನಗಳು

★ ಸೋವಿಯತ್ ರಶಿಯಾದಲ್ಲಿ ಭಾರತದ ಕ್ರಾಂತಿಕಾರಿಗಳು
ಲೇಖಕರು: ಎಂ.ಎ. ಪರ್ಸಿತ್ಸ್
ಅನುವಾದ: ಸೂರ್ಯಕಾಂತ ಸೊನ್ನದ

ವೈಜ್ಞಾನಿಕ

★ ಮದ್ಯಪಾನ, ಸಂತೋಷ, ವ್ಯಸನ ಯಾವುದು ಸರಿ?
ಲೇಖಕರು: ಕೆ.ಪಿ. ಸ್ವಾಮಿ

★ ಸೂಪರ್‌ನೋವಾ
ಲೇಖಕರು: ಜೆ.ಬಿ. ನಾರಾಯಣ್ ರಾವ್

ಈ ಮೇಲಿನ ಪುಸ್ತಕಗಳ ಪ್ರಕಾಶಕರು: ನವಕರ್ನಾಟಕ ಪ್ರಕಾಶನ

ಮೇಲಿನ ಎಲ್ಲಾ ಪುಸ್ತಕಗಳ ವಿತರಕರು
ನವಕರ್ನಾಟಕ ಪ್ರಕಾಶನ
ಬೆಂಗಳೂರು

ಚೆನ್ನಾರೆಡ್ಡಿ ಆಡ...
ಪುಂಡರ, ಪೋಲೀಸರ, ನೇ...

ಅಂಧ್ರ ಪ್ರದೇಶದಲ್ಲಿ ಸರಕಾರವೆಂಬುದು ಇದೆಯೇ!
ಇದು ಕಾಂಗ್ರೆಸ್ಸಿಗರಿಗೂ ಬಂದಿರುವ ಸಂಶಯ!
ಪಶ್ಚಿಮ ಬಂಗಾಳದಲ್ಲಿ ಜಿ.ಎನ್.ಎಲ್.ಎಫ್.
ಅಸ್ಸಾಂನಲ್ಲಿ ಬೋಡೋ
ತ್ರಿಪುರಾದಲ್ಲಿ ಟಿ.ಎನ್.ವಿ.ಯಂತೆ
ಅಂಧ್ರದಲ್ಲಿ ನಕ್ಸಲೀಯರನ್ನು ಕಾಂಗ್ರೆ
ಪ್ರಜಾಪ್ರಭುತ್ವ ಶಕ್ತಿಗಳ ದಮನಕ್ಕೆ ಬಳಸುತ್ತಿದೆ.
ಇದರ ಪರಿಣಾಮವೇ ಕಾನೂನು ವ್ಯವಸ್ಥೆಯ ದುಃ ಸ್ಥಿತಿ
ಅಂಧ್ರಪ್ರದೇಶದ ಪ್ರಜಾಪ್ರಭುತ್ವ ಶಕ್ತಿಗಳಿಂದ
ಜೂನ್ 7 ರಂದು ಇದಕ್ಕೆ ಬಲವಾದ ಪ್ರತಿಭಟನೆ.

ಅಂಧ್ರ ಪ್ರದೇಶದಲ್ಲಿ ಕಾಂಗ್ರೆ ಸರ್ಕಾರ ಬಂದಾಗ ಅದು ತಕ್ಷಣ ಮಾಡಿದ ಕೆಲಸ ಆರು ತಿಂಗಳ ಹಿಂದೆ ಅಧಿಕಾರಕ್ಕೆ ವೆಂದರೆ 1988ರಲ್ಲಿ ಕಾಂಗ್ರೆ ಎಂ.ಎಲ್.ಎ. ವಿ.ಎಂ.ರಂಗರಾವ್ ಕೊಲೆಯ ಸಂದರ್ಭದಲ್ಲಿ ದಂಗೆ, ಲೂಟಿ, ಅಗ್ನಿಸ್ಪರ್ಶದ ಅಪಾದನೆ ಹೊತ್ತ ಸಾವಿರಾರು ಅಪರಾಧಿಗಳನ್ನು ನ್ಯಾಯಾಲಯದ ನೀತಿಗಳನ್ನೆಲ್ಲಾ ಗಾಳಿಗೆ ತೂರಿ ಏಕಪಕ್ಷೀಯವಾಗಿ ಬಿಡುಗಡೆ ಮಾಡಿದ್ದು, ಪರಿಣಾಮ ಸಹಜವಾಗಿತ್ತು. ಕಾನೂನು, ವ್ಯವಸ್ಥೆಯಲ್ಲಿ ಸಂಪೂರ್ಣ ಕುಸಿತ, ಕೊಲೆ, ಸುಲಿಗೆ, ಅತ್ಯಾಚಾರಗಳ ಕೋಲಾಹಲ ರಾಜ್ಯದ ಉದ್ದಗಲಕ್ಕೂ.

ಗುಂಟೂರು ಜಿಲ್ಲೆಯಲ್ಲಿ ಇದು ಪರಾಕಾಷ್ಠೆಗೇರಿದೆ. ಏಪ್ರಿಲ್ ಮೊದಲವಾರದಲ್ಲೇ 5 ತೆಲುಗುದೇಶಂ ಕಾರ್ಯಕರ್ತರ ಕೊಲೆ. ಪಳನಾಡು ಎಂಬಲ್ಲಿ ಪ್ರತಿದಿನವೆಂಬಂತೆ ಬಾಂಬುಸ್ಫೋಟ. ಪ್ರಕಾಶಂ ಜಿಲ್ಲೆಯಲ್ಲಿ ಡಾ. ಸಿಂಗಯ್ಯ ಎಂಬವರ ಕೊಲೆ. ಅನಂತಪುರ, ವಿಜಯವಾಡಾ ಜಿಲ್ಲೆಗಳಲ್ಲಿ ಪ್ರತಿದಿನವೂ ಇಂತಹ ಘಟನೆಗಳು. ಕಾಂಗ್ರೆಸ್ ಆಳ್ವಿಕೆಯಲ್ಲಿ ಕಿರುಕುಳ ಎಷ್ಟೊಂದು ಅಸಹನೀಯವಾಗಿದೆ ಎಂಬುದಕ್ಕೆ ಒಂದು ಉದಾಹರಣೆಯೆಂದರೆ ಗುಂಟೂರು ಜಿಲ್ಲೆಯ ನಾರ್ಸೆಪಾಡು ಹಳ್ಳಿಯ ಜನ ಒಬ್ಬ ಕಾಂಗ್ರೆಸ್ಸಿಗನನ್ನು ಸಿಟ್ಟಿಗೆದ್ದು ಕೊಂದುಹಾಕಿಬಿಟ್ಟರು.

ಚೆನ್ನಾರೆಡ್ಡಿ ಸರ್ಕಾರ ಖುಲಾಸೆ ಮಾಡಿದ ಗಲಭೆಕೋರರು ಯಾವ ಅಂಜಿಕೆ ಹಿಂಜರಿಕೆಯೂ ಇಲ್ಲದೆ ಅಡ್ಡಾಡುತ್ತಿರುವುದು ಸಮಾಜ-ವಿರೋಧಿ ಶಕ್ತಿಗಳಿಗೆ ಪ್ರೋತ್ಸಾಹ ದೊರೆತಂತಾಗಿತ್ತು. ಚೆನ್ನಾರೆಡ್ಡಿ ಈ ಸಮಾಜವಿರೋಧಿ ಶಕ್ತಿಗಳನ್ನು, ಆಡಳಿತ ಯಂತ್ರವನ್ನು, ಪೋಲೀಸರನ್ನು ಮತ್ತು ಜತೆಗೆ ನಕ್ಸಲೀಯರನ್ನು ವಿರೋಧಪಕ್ಷಗಳ ಮೇಲೆ, ನಾಗರಿಕ ಹಕ್ಕುಗಳ ಮೇಲೆ ಧಾಳಿ ಮಾಡಲು ಆಯುಧಗಳಾಗಿ ಬಳಸುತ್ತಿರುವುದು ಈಗ ಎಲ್ಲರಿಗೂ ಸ್ಪಷ್ಟವಾಗಿದೆ.

ಹರಿಜನ-ಗಿರಿಜನರ ಬಗ್ಗೆ ಕಾಂಗ್ರೆನದ್ದು ಎಂತಹ ಮೊಸಳೆ ಕಣ್ಣೀರು ಎಂಬುದನ್ನು ತೋರಿಸಿಕೊಡುವ ಘಟನೆಗಳೂ ಹಲವಾರು. ತೆಲುಗು ದೇಶಂ ಮತ್ತು ಇತರ ವಿರೋಧಿ ಪಕ್ಷಗಳಿಗೆ ಮತನೀಡಿದ ಹರಿಜನ-ಗಿರಿಜನರ ಮೇಲೆ ಹಲ್ಲೆ, ಸಾಮೂಹಿಕ ಮಾನಭಂಗ, ಬೆತ್ತಲೆ ಮೆರವಣಿಗೆಯಉದಾಹರಣೆಗಳಿವೆ.

ಹಿಂದಿನ ಆಳುವ ಪಕ್ಷವಾದ ತೆಲುಗು ದೇಶಂ ಕಾರ್ಯಕರ್ತರು ಮತ್ತು ಇತರ ವಿರೋಧ ಪಕ್ಷಗಳ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ್ದರೂ ಕಾಂಗ್ರೆನ ಧಾಳಿಗಳ ಮುಖ್ಯ ಗುರಿ ಸಿ.ಪಿ.ಐ. (ಎಂ) (ಬಾಕ್ಸ್ ನೋಡಿ). ಏಕೆಂದರೆ ಕಾಂಗ್ರೆಸ್‌ನ ಸರ್ವಾಧಿಕಾರತ್ವಕ್ಕೆ ಪ್ರತಿಭಟನೆಯ ನೇತೃತ್ವ ಕೊಟ್ಟವರು ಮಾರ್ಕ್ಸಿಷ್ಟರು. ಅಂಧ್ರದಲ್ಲಿ ಹಿಂದೆ ತೆಲುಗುದೇಶಂ ಆಡಳಿತ ಬಲಪಡಿಸುವಲ್ಲಿ ಮುಖ್ಯ ಪಾತ್ರ ಸಿ.ಪಿ.ಐ.(ಎಂ) ನದ್ದು ಎಂಬುದು ಇನ್ನೊಂದು ಕಾರಣ. ಸಿಪಿಐ(ಎಂ) ಇಲ್ಲದಿದ್ದರೆ ತಲುಗುದೇಶಂ ಸರ್ಕಾರ ಎಂದೋ ಬೀಳುತ್ತಿತ್ತು ಎಂದು ಆಗಿನ ಒಬ್ಬ ಕೇಂದ್ರ ಮಂತ್ರಿಗಳೂ ಹಲುಬಿದ್ದರು. ತೆಲುಗುದೇಶಂ ಆಡಳಿತದಲ್ಲೂ, ನಂತರವೂ ತೀವ್ರ ಭೂಹೋರಾಟ ಕಾಂಗ್ರೆ ಸರ್ಕಾರ ಈಗ ತೋರುತ್ತಿರುವ ತೀವ್ರ ಹಗೆತನಕ್ಕೆ ಮತ್ತೊಂದು ಕಾರಣ. ಮುಖ್ಯಮಂತ್ರಿ ಚೆನ್ನಾರೆಡ್ಡಿಯ ಸಂಬಂಧಿಕ ರಾಮಚಂದ್ರ ರೆಡ್ಡಿಯೂ ಸೇರಿದಂತೆ ಹಲವು ಜಮೀನ್ದಾರರು ಆಕ್ರಮಿಸಿಕೊಂಡ 300 ಎಕ್ರೆ ಮಿಗುತೆ ಜಮೀನನ್ನು ಬಿಡಿಸಲು ಈ ತೀವ್ರ ಹೋರಾಟಕ್ಕೆ ಸಾಧ್ಯವಾಗಿತ್ತು. ಆದ್ದರಿಂದ ಕಾಂಗ್ರೆ ಅಧಿಕಾರಕ್ಕೆ ಬಂದ ಕೂಡಲೇ ಎಲ್ಲಾ ಪಾಳೆಯಗಾರೀ ಶಕ್ತಿಗಳು ಒಂದಾಗಿ ಬಡವರ ಮೇಲೆ ಧಾಳಿ ನಡೆಸಿವೆ. ಭೂಮಾಲಿಕರ ವಿರುದ್ಧ ಹೋರಾಡುವ ಮಾತನಾಡುತ್ತಾ ಈಗ ಅವರ ಮನೆಗಳಲ್ಲೇ ವಾಸ ಮಾಡುವ, ಅವರ ಪೋಷಣೆಯಲ್ಲೇ ಬದುಕುತ್ತಿರುವ ನಕ್ಸಲೀಯರಿಂದ ಇವರಿಗೆ ಸಂಪೂರ್ಣ ನೆರವು, ಬೆಂಬಲ!

ಹೈದರಾಬಾದಿನಲ್ಲಿ ಚಿತ್ರ ಸಾಕು ವಾರಂಗಲ್ಲಿನಲ್ಲಿ ಕೊಡಲಿ ಬೇಕು"

ಕಾಂಗ್ರೆ ಆಳ್ವಿಕೆಯ ಕೃಪಾ ಛತ್ರದಡಿಯಲ್ಲಿ ಸಿ.ಪಿ.ಐ.(ಎಂ) ಮೇಲೆ ನಕ್ಸಲೀಯರು ತಮ್ಮ ಧಾಳಿಗಳನ್ನು ಮತ್ತೆ ಆರಂಭಿಸಿದ್ದಾರೆ. ಸಿ.ಪಿ.ಐ.(ಎಂ) ಒಂದು ದೊಡ್ಡ ಶಕ್ತಿಯಾಗಿ ಬೆಳೆಯುತ್ತಿರುವ "ಮಹಬೂಬ್‌ನಗರ ಜಿಲ್ಲೆಯನ್ನು ಪ್ರವೇಶಿಸಲು ಕಾಂಗ್ರೆ ನೆರವಿನಿಂದ ನಕ್ಸಲೀಯರು ಪ್ರಯತ್ನಿಸುತ್ತಿದ್ದಾರೆ. ಬೊಮ್ಮನಹಳ್ಳಿ ಗ್ರಾಮದಲ್ಲಿ ಸಶಸ್ತ್ರ, ಹಲ್ಲೆ ನಡೆಸಿ ಸಿ.ಪಿ.ಐ.(ಎಂ)ನ ಬಾಲಯ್ಯ ಹಾಗೂ ಪಂಚಾಯತು ಉಪಾಧ್ಯಕ್ಷರನ್ನು ಗಂಭೀರವಾಗಿ ಗಾಯಗೊಳಿಸಿದರು. ಇನವೋಲು ಗ್ರಾಮದ ಮೇಲೆ ಧಾಳಿ ನಡೆಸಿ ಹಿರಿಯ ಸಿ.ಪಿ.ಐ(ಎಂ) ಮುಖಂಡ ಹಾಗೂ ಜಿಲ್ಲಾ ಸಮಿತಿ ಸದಸ್ಯರಾದ ರಾಮಚಂದ್ರರೆಡ್ಡಿ ಯವರ ಮೇಲೆ ಕೈ ಮಾಡಿ ಭಯ ಹರಡಲು ಪ್ರಯತ್ನಿಸಿದರು. ಇನ್ನೊಬ್ಬ ಹರಿಜನ ಸಿ.ಪಿ.ಐ(ಎಂ) ಕಾರ್ಯಕರ್ತ ಪುಲ್ಲಯ್ಯ ಅವನ ಹೆಂಡತಿ, ಮಕ್ಕಳು ಹಾಗೂ ಇನ್ನೊಬ್ಬ ವಾಸಣ್ಣ ಎಂಬಾತನನ್ನು ವಿಪರೀತವಾಗಿ ಥಳಿಸಿದರು.

ನಲಗೊಂಡ ಜಿಲ್ಲೆಯಲ್ಲಿ ನಕ್ಸಲೀಯರನ್ನು ಬಿಟ್ಟು ಸಿ.ಪಿ.ಐ(ಎಂ) ಸೇರಿದ ಡಿ. ಮುರ್‍ಯಾಲು ಎಂಬ ಹರಿಜನ ಸಂಗಾತಿಯನ್ನು ಅವರು ಕೊಂದು ಹಾಕಿದರು. ಅಲ್ಲಿನ ಕಾಂಗ್ರೆ ಎಂ.ಪಿ. ಹಳ್ಳಿ ಹಳ್ಳಿಗೆ ಹೋಗಿ "ವಿರೋಧಿಗಳನ್ನು ಕೊಲ್ಲಿ, ನಿರ್ನಾಮ ಮಾಡಿ" ಎಂದು ಬಹಿರಂಗವಾಗಿ ಹೇಳಿಕೊಂಡು ತಿರುಗಾಡುತ್ತಿದ್ದಾನೆ. ಪರಿಣಾಮವಾಗಿ ಮೆದಿಪಲ್ಲಿಯ ಸಿ.ಪಿ.ಐ. (ಎಂ) ಎಂ.ಎಲ್.ಎ. ಮೇಲೆ ಪೋಲೀಸರ ಎದುರಿನಲ್ಲೇ ಕೈಮಾಡಲಾಯಿತು. ಜಿಲ್ಲಾ ಸಮಿತಿ ಸದಸ್ಯ ರಾಮಕೃಷ್ಣ ರೆಡ್ಡಿಯವರ ಕೊಲೆ ಯತ್ನವೂ ನಡೆಯಿತು. ಈ ಜಿಲ್ಲೆಯಲ್ಲಿ ಕಾಂಗ್ರೆನ ಬಾಡಿಗೆ ಗೂಂಡಾಗಳು ಆರು ಟಿ.ಡಿ.ಪಿ. ಹಾಗೂ ಸಿ.ಪಿ.ಐ.(ಎಂ) ಕಾರ್ಯಕರ್ತರ ಕೊಲೆ ಮಾಡಿದ್ದಾರೆ. 3000 ಸಿ.ಪಿ.ಐ.(ಎಂ) ಕಾರ್ಯಕರ್ತರು ಹಾಗೂ ಹಿತೈಷಿಗಳ ಮೇಲೆ ಸುಳ್ಳು ಕೇಸುಗಳನ್ನು ಹಾಕಿ ಸತಾಯಿಸಲಾಗುತ್ತಿದೆ.

ಗುಂಟೂರು ಜಿಲ್ಲೆಯಲ್ಲಿ ಸಿಟ್ಟಿಗೆದ್ದ ಜನ ಕಾಂಗ್ರೆ ವ್ಯಕ್ತಿಯೊಬ್ಬನನ್ನು ಕೊಲೆ ಮಾಡಿದ್ದಕ್ಕೆ ಆ ಊರಿನವರೆಂಬ ಕಾರಣಕ್ಕೆ ತಕ್ಷಣ ಸಿ.ಪಿ.ಐ(ಎಂ) ಜಿಲ್ಲಾ ಕಾರ್ಯದರ್ಶಿ ಹಾಗೂ ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯ ಪಿ. ವೆಂಕಟಪತಿ, ಹಾಗೂ ಅವರ ಪತ್ನಿ ಮತ್ತು ಜಿಲ್ಲಾ ಮಹಿಳಾ ಸಂಘದ ಕಾರ್ಯದರ್ಶಿ ಪಿ. ಭಾರತಿಯವರ ಮೇಲೆ ಸುಳ್ಳು ಮೊಕದ್ದಮೆ ಹಾಕಲಾಗಿದೆ. ಆದರೆ ರಂಗಾರೆಡ್ಡಿ ಜಿಲ್ಲೆಯ ಸಿ.ಪಿ.ಐ (ಎಂ) ಮುಖಂಡರಾದ ಮಹಬೂಬ್ ಪಾಷಾ ಮತ್ತು ನರಹರಿಯವರ ಕೊಲೆ ಗಾರರು ಬಹಿರಂಗವಾಗಿಯೇ ಅಡ್ಡಾಡಿಕೊಂಡಿದ್ದಾರೆ.

ವಾರಂಗಲ್ ಜಿಲ್ಲೆಯ ಶಮೀರ್ ಪೇಟ್‌ನಲ್ಲಿ 'ಪೀಪಲ್ಸ್‌ವಾರ್' ಗುಂಪಿನವರು ಇಬ್ಬರನ್ನು ಕೊಂದು ಸಿ.ಪಿ.ಐ (ಎಂ) ನ ಭಿಕ್ಷಾಪತಿ ಗಣುಗುಪಾಡು ಗ್ರಾಮ ಕಾರ್ಯದರ್ಶಿಯ ಮನೆಯ ಮೇಲೆ ಎರಡು ಬಾರಿ ಹಲ್ಲೆ ನಡೆಸಿದರು. ತಾರ್ಮುಡಿಪಲ್ಲಿಯ ಸಿ.ಪಿ.ಐ. (ಎಂ) ಸರಪಂಚನ್ನು ಬಲವಾಗಿ ಥಳಿಸಿದರು.

ಕಾಂಗ್ರೆ ಪ್ರೋತ್ಸಾಹದಿಂದ ಕೊಡಲಿ, ಮಚ್ಚುಗಳನ್ನು ಹಿಡಿದು ಜನರಿಂದ ಹಣ ಕೀಳುತ್ತಾ ಬಹಿರಂಗವಾಗಿಯೇ ಅಡ್ಡಾಡು ತ್ತಿರುವ ನಕ್ಸಲೀಯರಿಂದಾಗಿ ಸಿ.ಪಿ.ಐ (ಎಂ) ಕಾರ್ಯಕರ್ತರು ಮುಕ್ತವಾಗಿ ಅಡ್ಡಾಡು ವುದೇ ಕಷ್ಟವಾಗಿದೆ.

ಬಿ. ರಾಮಚಂದ್ರರೆಡ್ಡಿಯವರ ಮನೆಗೆ ಕಲ್ಲು ತೂರಿ ಅವರನ್ನು ಅಪಹರಿಸಲು ಯತ್ನಿಸಿ ವಿಫಲರಾದ ನಕ್ಸಲೀಯರು ಒಬ್ಬ ವಲಯ ಸಮಿತಿ ಕಾರ್ಯದರ್ಶಿ ಬಾಲಯ್ಯ ಎಂಬವರ ಮೇಲೆ ಹಲ್ಲೆ ಮಾಡಿ ಥಳಿಸಿ ಸತ್ತರೆಂದುಕೊಂಡು ಅಲ್ಲೇ ಬಿಟ್ಟು ಹೋದರು.

ವಾರಂಗಲ್ ಜಿಲ್ಲೆಯ ಮುಲುಗು ಪ್ರದೇಶದಲ್ಲಿ ಇಬ್ಬರು ತೆಲುಗುದೇಶಂ ಕಾರ್ಯಕರ್ತರನ್ನು ಅವರು ಕೊಂದರು. ಅದೇ ವೇಳೆಗೆ ಕೆಲವು ವರ್ಷಗಳ ಹಿಂದೆ ಕಾಮ್ರೇಡ್ ಭೀಷ್ಮರಾವ್ ಮತ್ತು ಚಂದ್ರರಾವ್‌ರ ಕೊಲೆಯಲ್ಲಿ ಅಪಾರಿತರಾಗಿದ್ದ ಇಬ್ಬರು ಬಂಧಿಗಳ ಬಿಡುಗಡೆಯಾಯಿತು!

ಪೀಪಲ್ಸ್ ವಾರ್ ಗುಂಪಿನ ಒಬ್ಬ ಮುಖಂಡ ಮತ್ತು ಪ್ರಸಿದ್ಧ ಕಲಾವಿದ ಗದ್ದರ್ ಹೆಗಲ ಮೇಲೆ ಕೊಡಲಿ ಯೇರಿಸಿ ಕೊಂಡು ಬಹಿರಂಗವಾಗಿಯೇ ಮಾರ್ಕ್ಸ್ ವಾದಿಗಳಿಗೆ ಬೆದರಿಕೆ ಹಾಕಿದ್ದಾನೆ "ಹೈದರಾಬಾದಿನಲ್ಲಿ ಚಿತ್ತವಷ್ಟೇ ಸಾಕು. ಆದರೆ ವಾರಂಗಲ್‌ನಲ್ಲಿ ಸಿ.ಪಿ.ಐ.(ಎಂ) ಗೂಂಡಾಗಳಿರುವುದರಿಂದ ಕೊಡಲಿಯೇ ಬೇಕು". ಕ್ರಾಂತಿಯ ಪ್ರಥಮ ಹಂತವಾಗಿ "ಆಳುವ ವರ್ಗಗಳನ್ನು ಭಯವಿಹ್ವಲಗೊಳಿಸುವ ಕಾರ್ಯಾಚರಣೆಯ ನಕ್ಸಲೀಯ ಅವತರಣಿಕೆಯಿದು!"

★ ★ ★

ಕಾಂಗ್ರೆ ಮತ್ತು

ನಕ್ಸಲೀಯರ ಚಟುವಟಿಕೆಗಳು ಕಾಂಗ್ರೆಸ್ (ಐ) ಅಧಿಕಾರಕ್ಕೆ ಬಂದ ಮೇಲೆ ಅಪಾಯಕಾರೀ ಮಟ್ಟದಲ್ಲಿ ಹೆಚ್ಚುತ್ತಿರುವುದು ಬೂರ್ಜ್ವಾ ಪತ್ರಿಕೆಗಳಲ್ಲಿ ಬರುವ ವರದಿಗಳಿಂದಲೂ ಸ್ಪಷ್ಟವಾಗಿ ಕಾಣುತ್ತಿದೆ. ತೆಲುಗುದೇಶಂ ಸರ್ಕಾರವಿದ್ದಾಗ ಅದಕ್ಕೆ ತೊಂದರೆ, ಸಮಸ್ಯೆಗಳನ್ನು ಸೃಷ್ಟಿಸಲು ತನ್ನ ಶತಪ್ರಯತ್ನದಲ್ಲಿ ಕಾಂಗ್ರೆ ನಕ್ಸಲೀಯರ ಭಯೋತ್ಪಾದಕರ ಚಟುವಟಿಕೆಗಳನ್ನು ಬಳಸಿ ಕೊಂಡಿತು. ಆದ್ದರಿಂದ ಎಡ ಘೋಷಣೆಗಳ ಮರೆಯಲ್ಲಿ ತಮ್ಮ ಕೈಂಕರ್ಯ ಮಾಡಿದ ನಕ್ಸಲೀಯರಿಗೆ ಕಾಂಗ್ರೆ ತಾನು ಅಧಿಕಾರಕ್ಕೆ ಬಂದ ಕೂಡಲೇ ತಕ್ಕ ಪ್ರತಿಫಲ ನೀಡುತ್ತಿರುವಂತೆ ಕಾಣುತ್ತಿದೆ. ರಿಯಾಯ್ತಿಗಳ ಸುಗ್ಗಿ ಅವರಿಗೆ. ಆದ್ದರಿಂದ ಜನತೆಯ ಪ್ರತಿನಿಧಿಗಳನ್ನು, ಮಂಡಲ ಪಂಜಾಯ್ತಿ ಜಿಲ್ಲಾ ಪರಿಷತ್ ಸದಸ್ಯರನ್ನು, ತೆಲುಗು ದೇಶಂನ ಪ್ರತಿನಿಧಿಗಳನ್ನು ಹಾಡುಹಗಲೇ ಅಪಹರಣ ಮಾಡಿದ, ಅವರ ಬಿಡುಗಡೆಗಾಗಿ ಪ್ರತಿಫಲ ಕಿತ್ತುಕೊಳ್ಳದ ದಿನವೇ ಇಲ್ಲವೇನೋ ಎಂಬಂತಾಗಿದೆ.

ಹಿಂದೆ 1979 ರಲ್ಲಿ ಅಧಿಕಾರಕ್ಕೆ ಬಂದಾಗಲೂ ಚೆನ್ನಾರೆಡ್ಡಿ ವಿರೋಧ ಪಕ್ಷಗಳ, ಮುಖ್ಯವಾಗಿ ಸಿ.ಪಿ.ಐ. (ಎಂ) ವಿರುದ್ಧ ನಕ್ಸಲೀಯರನ್ನು ಆಯುದವಾಗಿ ಬಳಸಿದ್ದರು. ಇದು ಕಾಂಗ್ರೆಗಳ ಹಳೆಯ ತಂತ್ರ. ಆಗ ಕಾಂ. ಪಿ.ಎಸ್. ಸುಂದರಯ್ಯನವರೇ ಸ್ವತಃ ಒಂದು ಕರಪತ್ರ ಬರೆದು ನಕ್ಸಲೀಯರ ಮತ್ತು ಕಾಂಗ್ರೆಗಳ ತಂತ್ರವನ್ನು ಬಯಲಿಗೆಳೆದಿದ್ದರು. ನಕ್ಸಲೀಯರ ನಿಜವಾದ ಬಲ ಅಂದಿಗಿಂತ ಬಹಳ ಕಡಿಮೆಯಾಗಿದೆ. ಆದರೆ ಅವರೀಗ ನಿಧಾನವಾಗಿ ಬಾಡಿಗೆ ಕೊಲೆಗಾರರ ಮಟ್ಟಕ್ಕಿಳಿಯುತ್ತಿದ್ದಾರೆ. ಪ್ರಜಾಪ್ರಭುತ್ವಚಳುವಳಿಯ ಹಲವಾರು ಮಂದಿಯನ್ನು ಕೊಂದಿದ್ದಾರೆ.. ಕೊಲ್ಲುತ್ತಿದ್ದಾರೆ. ಚೆನ್ನಾರೆಡ್ಡಿಯವರ ಕೃಪಾ ಛತ್ರದಡಿಯಲ್ಲಿ ಕೆಲವು ಬೂರ್ಜ್ವಾ ಪತ್ರಿಕೆಗಳು, ಪಂಡಿತರು ಭಾವಿಸುವಂತೆ ನಕ್ಸಲೀಯ ಚಳುವಳಿ ಸಾಮಾಜಿಕ ಸಮಸ್ಯೆಯಲ್ಲ, ಕಾನೂನು ವ್ಯವಸ್ಥೆಯ ಸಮಸ್ಯೆ.

ಬಹಳ ಹಿಂದೆಯೇ ನಮ್ಮ ಪಕ್ಷ ಎಚ್ಚರಿಸಿತು-ಪಶ್ಚಿಮ ಬಂಗಾಳದಲ್ಲಿ ಜಿ.ಎನ್.ಎಲ್.ಎಫ್. ಅಸ್ಸಾಂನಲ್ಲಿ ಬೋಡೋ, ತ್ರಿಪುರದಲ್ಲಿ ಟಿ.ಎನ್.ವಿ. ಗಳಂತೆ ಅಂಧ್ರದಲ್ಲಿ ನಕ್ಸಲೀಯರನ್ನು ಕಾಂಗ್ರೆ ಬಳಸಿಕೊಳ್ಳುತ್ತದೆ ಎಂದು ಎಚ್ಚರಿಸಿತು. ಈಗ ಆ ಎಚ್ಚರಿಕೆ ನಿಜವಾಗಿದೆ. ಕಾಂಗ್ರೆ ಮತ್ತು ನಕ್ಸಲೀಯರ ನಡುವೆ ಒಂದು ಒಳ ಒಪ್ಪಂದವೇ ನಡೆದಿರುವ ಶಂಕೆಯಿದೆ. ಚೆನ್ನಾರೆಡ್ಡಿ ಸರ್ಕಾರ ತೆಲುಗುದೇಶಂ, ಸಿ.ಪಿ.ಐ. (ಎಂ) ಕಾರ್ಯಕರ್ತರ ಮೇಲೆ ಸಾವಿರಾರು ಸುಳ್ಳು ಕೇಸುಗಳನ್ನು ಹಾಕುತ್ತಿರುವಾಗ ನಿಜವಾಗಿ ಕೊಲೆ ಸುಲಿಗೆ, ಲೂಟಿ ಮಾಡುತ್ತಿರುವ ನಕ್ಸಲೀಯರೊಂದಿಗೆ ಅತ್ಯಂತ ಉದಾರವಾಗಿದೆ. ನಕ್ಸಲೀಯರ ಗುಣಗಾನ ಮಾಡುತ್ತಿದ್ದಾರೆ ಕಾಂಗ್ರೆಸ್(ಐ) ಮುಖ್ಯಮಂತ್ರಿ ಹಾಗೂ ಅವರ ಸಹೋದ್ಯೋಗಿಗಳು. ಅವರ ಪ್ರಜಾನ್ಯಾಯಾಲಯಗಳು ಸಾಮಾಜಿಕ ನ್ಯಾಯಕೊಡಿಸುವಲ್ಲಿ ಅಪಾರ ಸೇವೆ ಸಲ್ಲಿಸಿವೆ ಎಂದು ಕೊಂಡಾಡುತ್ತಿದ್ದಾರೆ. ಏಕೆ?

ಸದ್ಯ ನಕ್ಸಲೀಯರಲ್ಲಿ ಸುಮಾರು ಹತ್ತು ಗುಂಪುಗಳು ರಾಜ್ಯದಲ್ಲಿ ಕೆಲಸ ಮಾಡುತ್ತಿವೆ. ಕೊಂಡಪಲ್ಲಿ ಸೀತಾರಾಮಯ್ಯ ನೇತೃತ್ವದ ಪೀಪಲ್ಸ್ ವಾರ್ ಗ್ರೂಪ್ (ಪಿ.ಡಬ್ಲ್ಯು.ಜಿ) ಅತ್ಯಂತ ದೊಡ್ಡದು. ಗುಂಪು ಕಲಹ ಇವುಗಳ ನಡುವೆ ಹೆಚ್ಚುತ್ತಿದೆ. ಪಿ.ಡಬ್ಲ್ಯುಜಿ ಹಾಗೂ ಇನ್ನೊಂದು ಸಿ.ಪಿ. ಚಂದ್ರಪುಲ್ಲಾ ರೆಡ್ಡಿ ಗುಂಪು ಪರಸ್ಪರ ತಮ್ಮ ಬಲ ತೋರಿಸಿಕೊಳ್ಳುವ ಸ್ಪರ್ಧೆಯಲ್ಲಿ ಸಾವಿರಾರು ಎಕ್ರೆ ಸುರಕ್ಷಿತ ಅರಣ್ಯ ಕಡಿದುಹಾಕಿದ್ದಾರೆ. ಆದರೂ, ಯಾವ ಫಾರೆಸ್ಟ್ ರೇಂಜರೂ ಹತ್ತಿರ ಸುಳಿದಿಲ್ಲ. ಯಾವ ಮೊಕದ್ದಮೆಯೂ ಇಲ್ಲ! ಕ್ರಮವೂ ಇಲ್ಲ.

ನಿಜಾಮಾಬಾದ್ ಜಿಲ್ಲೆಯಲ್ಲಿ ಒಂದು ಸಾರ್ವಜನಿಕ ಸಭೆಯಲ್ಲಿ ಡಿ.ಎಸ್.ಪಿ.ಗೆ ನೇಣು ಹಾಕುವುದಾಗಿ ಬಹಿರಂಗವಾಗಿಯೇ ನಕ್ಸಲೀಯರು ಘೋಷಿಸಿದರು ಮುಖ್ಯಮಂತ್ರಿ ಕಿವುಡಾಗಿಯೇ ಇದ್ದಾರೆ.

ಇತ್ತೀಚೆಗೆ ನಿಜಾಮಾಬಾದ್‌ನ ವರ್ತಕರು ನಕ್ಸಲೀಯರ ಬೆದರಿಕೆಗಳಿಂದಾಗಿ 13 ಲಕ್ಷ ರೂ. ಸಂಗ್ರಹಿಸಿ ಅದನ್ನು ಕೊಂಡುಹೋಗಿ ಎಂದು ಪತ್ರಿಕಾ ಸಮ್ಮೇಳನವೊಂದರಲ್ಲಿ ನಕ್ಸಲೀಯರನ್ನು ಕೇಳಿಕೊಂಡರು! ಹೀಗಿದೆ ಚೆನ್ನಾರೆಡ್ಡಿ ಸರ್ಕಾರದಲ್ಲಿ ಕಾನೂನು-ವ್ಯವಸ್ಥೆ. ಸಣ್ಣ ಮಧ್ಯಮ ವರ್ತಕರಂತೂ ನಕ್ಸಲೀಯರ ಭಯದ ನೆರಳಲ್ಲೇ ಬದುಕಬೇಕಾಗಿದೆ.

> ರಾಜ್ಯ ಸರ್ಕಾರವೇ ನೀಡಿದ ಮಾಹಿತಿ ಪ್ರಕಾರ ಪ್ರಸ್ತುತ ವರ್ಷದಲ್ಲಿ ನಕ್ಸಲೀಯದ ವಿರುದ್ಧ ಡಕಾಯಿತಿ ಹಾಗೂ 438 ಇತರ ಕೇಸುಗಳನ್ನು ಹಾಕಲಾಗಿದೆ. 39 ಶಸ್ತ್ರಾಸ್ತ್ರಗಳನ್ನು ಅವರು ಕದ್ದರು. 79 ಸಾರಿಗೆ ನಿಗಮದ ಬಸ್ಸುಗಳನ್ನು ಒಂಭತ್ತು ಲಾರಿಗಳನ್ನು 27 ಜೀಪುಗಳನ್ನು, ಏಳು ಟ್ರಾಕ್ಟರುಗಳನ್ನು ಸುಟ್ಟರು. ಸೇಂದಿ ಅಂಗಡಿಗಳಿಗೆ 38 ಬಾರಿ ಧಾಳಿ ನಡೆಸಿದರು.

ಬೆದರಿಕೆ ಬ್ಲಾಕ್‌ಮೇಲ್‌ಗಳ ಮೂಲಕ ಲಕ್ಷ ಗಟ್ಟಲೆ ಹಣ ಅವರಿಂದ ನಕ್ಸಲೀಯರು ಸುಲಿಯುತ್ತಿದ್ದಾರೆ. ಇತ್ತೀಚೆಗೆ ರೈತ ಕೂಲಿಕಾರ ಸಂಘದ ಸಮ್ಮೇಳನದ ಸಮಯದಲ್ಲಿ ಅವರ ಹಣವಸೂಲಿಯ ವಿಧಾನಗಳ

ತದಲ್ಲಿ ಲೀಯರ ದರ್ಬಾರು

ಸಾಲಮನ್ನಾ ನಕಾರ, ಬಸ್‌ದರ ಏರಿಕೆ ಎಲ್ಲಾ ಕಾಂಗ್ರೆ ರಾಜ್ಯಗಳಲ್ಲಿ!

ಬಸ್‌ದರ ಏರಿಸಿ ಜನರ ತೊಳಲಾಟ ಹೆಚ್ಚಿಸಿದ ಮೂರು ರಾಜ್ಯಗಳೂ ಕಾಂಗ್ರೆ ಆಳ್ವಿಕೆಯಲ್ಲಿರುವುದು ಕೇವಲ ಆಕಸ್ಮಿಕವೇ? ಕರ್ನಾಟಕ ವೀರೇಂದ್ರ ಪಾಟೀಲ್ ಸರ್ಕಾರ, ಆಂಧ್ರ ಚೆನ್ನಾರೆಡ್ಡಿ ಸರ್ಕಾರ ಮತ್ತು ಮಹಾರಾಷ್ಟ್ರದ ಶರದ್ ಪವಾರ್ ಸರ್ಕಾರ ಮೂರು ಸರ್ಕಾರಗಳು ಬಸ್‌ಪ್ರಯಾಣ ದರವನ್ನು ಹೆಚ್ಚಿಸಿವೆ.

ಉದ್ದೇಶ ಪೂರ್ವಕವಾಗಿ ವಿರೋಧಪಕ್ಷಗಳ ಮೇಲೆ ಪುಂಡ-ಪೋಕರಿಗಳನ್ನು, ಪೋಲೀಸರನ್ನು, ನಕ್ಸಲೀಯರನ್ನು ಹರಿಯ ಬಿಟ್ಟು ಪ್ರಜಾಪ್ರಭುತ್ವ ಚಳುವಳಿಯ ಮೇಲೆ ಹಲ್ಲೆಗಳನ್ನು ನಡೆಸುತ್ತಿರುವ ಚೆನ್ನಾರೆಡ್ಡಿ ಸರ್ಕಾರ ಸಹಜವಾಗಿಯೇ ಹಿಂದಿನ ಟಿ.ಡಿ.ಪಿ. ಸರ್ಕಾರದ, ಜನಗಳಿಗೆ ಪ್ರಯೋಜನಕಾರಿಯಾಗಿದ್ದ ಕೆಲವು ಯೋಜನೆಗಳನ್ನು, ಕಲ್ಯಾಣ ಯೋಜನೆಗಳನ್ನು ರದ್ದು ಮಾಡಿದೆ. ಕೆ.ಜಿ.ಗೆ ಎರಡು ರೂಪಾಯಿ ಅಕ್ಕಿ ಪೂರೈಸುವ ಯೋಜನೆಯನ್ನು ಕಡೆಗಣಿಸಿದೆ. ಆದರೆ ಒಂದೂ ಹೊಸ ಕಲ್ಯಾಣ ಯೋಜನೆ ರೂಪಿಸಿಲ್ಲ. ನೀರಿನ ಸೆಸ್ ಏರಿಸಲಾಗಿದೆ. ಅದನ್ನು ಬಲವಂತದಿಂದ ವಸೂಲಿ ಮಾಡಲಾಗುತ್ತಿದೆ. ವೀರೇಂದ್ರ ಪಾಟೀಲ್ ಸರ್ಕಾರದಂತೆ 10 ಸಾವಿರ ರೂ ವರೆಗಿನ ಸಾಲಮನ್ನಾ ಮಾಡಲು ನಿರಾಕರಿಸುತ್ತಿದೆ. ನಗರಾಸ್ತಿಮಿತಿ ಕುರಿತ ಚಲ್ಲಕೊಂಡಯ್ಯ ಕಮಿಶನ್ ವರದಿಯನ್ನು ಮೂಲೆಗುಂಪು ಮಾಡಲು ಪ್ರಯತ್ನಿಸುತ್ತಿದೆ.

ಚಂಡಮಾರುತ ಪೀಡಿತರಿಗೆ ಸಂಪೂರ್ಣ ಪರಿಹಾರ ದೊರೆಯುತ್ತಿಲ್ಲ ಎಂದು ಇಬ್ಬರು ಕಾಂಗ್ರೆ ಮಂತ್ರಿಗಳೇ ಆಪಾದಿಸಿದ್ದಾರೆ! ಭ್ರಷ್ಟಾಚಾರ ಆರೇ ತಿಂಗಳಲ್ಲಿ ಮಿತಿಮೀರಿದೆ. ಆಡಳಿತಕ್ಕೆ ಬಂದ ಕೆಲವೇ ದಿನಗಳಲ್ಲಿ ಒಬ್ಬ ಮಂತ್ರಿ ರಂಗರಾವ್ ರಾಜಿನಾಮೆ ನೀಡಬೇಕಾಯಿತು. ಸಹಕಾರ ಮಂತ್ರಿ ದಿವಾಕರ ರೆಡ್ಡಿ ಮೇಲೆ ಆಪಾದನೆಗಳಿವೆ. ಇನ್ನೊಬ್ಬ ಮಂತ್ರಿಯ ಮೇಲೂ ಆಪಾದನೆಗಳಿವೆ. ಕಾಂಗ್ರೆಸ್ಸಿನ ಒಬ್ಬ ಎಂ.ಪಿ. ಹಾಗೂ ನಾಲ್ಕು ಎಂ.ಎಲ್.ಎಗಳು ನಡೆಸಿದ ಪತ್ರಿಕಾ ಸಮ್ಮೇಳನ ಕಾಂಗ್ರೆ ಆಳ್ವಿಕೆಯಲ್ಲಿನ ಭ್ರಷ್ಟಚಾರೀ ವರ್ತನೆಗಳನ್ನು ಬಯಲಿಗೆಳೆದಿದೆ.

ಇವೆಲ್ಲಕ್ಕೆ ಪೂರಕವಾಗಿದೆಯೆಂಬಂತೆ ವಿಧಾನಸಭೆಯಲ್ಲಿ ವಿರೋಧ ಪಕ್ಷಗಳ ದನಿ ಅಡಗಿಸಲು ಪ್ರಯತ್ನಿಸುತ್ತಿದೆ. ಪ್ರಜಾಪ್ರಭುತ್ವ ಶಕ್ತಿಗಳ ಮೇಲೆ ಧಾಳಿ ಇವೆಲ್ಲಕ್ಕೂ ಮುಕುಟವಿದ್ದಂತಿರುವ 'ಸಾಧನೆ' ಈ ಕಾಂಗ್ರೆ ಸರಕಾರದ್ದು!

ಕ್ಸಲೀಯರು

ಬಗ್ಗೆ ಹಲವಾರು ಕಥೆಗಳೇ ಹರಿದಾಡುತ್ತಿವೆ. ಹಿಂದೆ ತಲೆಮರೆಸಿಕೊಂಡು ಸಮಾಜದ ಅಂಚಿನಿಂದ ನಡೆಸುತ್ತಿದ್ದ ಚಟುವಟಿಕೆಗಳನ್ನು ಈಗ ನಕ್ಸಲೀಯರು ಬಹಿರಂಗವಾಗಿಯೇ ಮಾಡುತ್ತಿದ್ದಾರೆ. ಅವರ ಸಶಸ್ತ್ರ ದಳಗಳನ್ನು ಈಗ ಕಾಂಗ್ರೆ ಆಡಳಿತ ಸಮಾಜದ ಮಧ್ಯಕ್ಕೆ ಆಹ್ವಾನಿಸಿದೆ - ಪ್ರಜಾಪ್ರಭುತ್ವ ಶಕ್ತಿಗಳ ಮೇಲೆ ಧಾಳಿ ಮಾಡಿ ತಮಗೆ ಸಹಾಯ ಮಾಡಲಿ ಎಂದು. ನಕ್ಸಲೀಯರು ಸಂತೋಷದಿಂದ ಕಾಂಗ್ರೆನ ಕೈಂಕರ್ಯ ತಮ್ಮದೇ ರೀತಿಯಲ್ಲಿ ಮಾಡುತ್ತಾ ಕ್ರಿಮಿನಲ್‌ಗಳ ಮಟ್ಟ ಕ್ಕಿಳಿಯುತ್ತಿದ್ದಾರೆ. ನಾಗರೀಕ ಹಕ್ಕುಗಳ ಅವರ ಈ ದಮನವನ್ನು ಕೆಲವು ಬೂರ್ಜ್ವಾ ಪತ್ರಿಕೆಗಳೂ ಹಾಡಿ ಹೊಗಳುತ್ತಿವೆ!

ಪರಿಸ್ಥಿತಿ ಎಷ್ಟೊಂದು ಹದಗೆಟ್ಟಿದೆಯೆಂದರೆ ಕಾಂಗ್ರೆಸ್ (ಐ) ನೊಳಗೆ ಈ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡುತ್ತಿದೆ. ತೆಲಂಗಾಣಾ ಜಿಲ್ಲೆಗಳಲ್ಲಿ ನಕ್ಸಲೀಯರು ಸಮನಾಂತರ ಅಧಿಕಾರ ಚಲಾಯಿಸುತ್ತಿದ್ದಾರೆ ಎಂದು ಅವರು ರಾಜೀವ್‌ಗಾಂಧಿಗೆ ದೂರು ಕೊಟ್ಟಿದ್ದಾರೆ ರಾಜ್ಯದಲ್ಲಿ ಸರಕಾರವೆಂಬುದು ಇದೆಯೇ ಇಲ್ಲವೇ ಎಂದು ಪರಿಶೀಲಿಸಲು ಮಾಜಿ ಕೇಂದ್ರಮಂತ್ರಿ ಚಿದಂಬರಂ ಭೇಟಿ ನೀಡಿ ಹೋಗಿದ್ದಾರೆ.

ರಾಜ್ಯದಲ್ಲಿ ಪ್ರಜಾಪ್ರಭುತ್ವ ಚಳುವಳಿಯನ್ನು ಛಿದ್ರಗೊಳಿಸಲು, ರಾಜ್ಯದಲ್ಲಿ ತಮಗೆ ದೊಡ್ಡ ಸವಾಲಾದ ಸಿ.ಪಿ.ಐ. (ಎಂ) ಹಾಗೂ ತೆಲುಗುದೇಶಂ ಸಂಘಟನೆಗಳನ್ನು ನಾಶಮಾಡಿ ತಮ್ಮ ಸ್ಥಾನ ಸುಭದ್ರಿತಗೊಳಿಸಲು ಚೆನ್ನಾರೆಡ್ಡಿ ಸರ್ಕಾರ ನಕ್ಸಲೀಯರನ್ನು ಆಟದ ದಾಳಗಳನ್ನಾಗಿ ಬಳಸಿಕೊಳ್ಳುತ್ತಿದೆ.

ಉದ್ದೇಶಪೂರ್ವಕವಾಗಿ ಪ್ರೋತ್ಸಾಹ ನೀಡುತ್ತಿರುವ ಕಾಂಗ್ರೆ ಸರ್ಕಾರ ಪೋಲೀಸ್ ಆಡಳಿತದಲ್ಲೂ ಹಸ್ತಕ್ಷೇಪ ಮಾಡುತ್ತಿದೆ. ಇದರಿಂದ ಕೆಲವು ಪೋಲೀಸ್ ವಲಯಗಳಲ್ಲೂ ತೀವ್ರ ಅಸಮಾಧಾನ ವ್ಯಕ್ತಗೊಂಡಿದೆ. ಇದರಿಂದಾಗಿ ಪರಿಸ್ಥಿತಿ ತೀರಾ ಹದಗೆಡುತ್ತಿದೆ.

ರಾಜ್ಯದ ಇಂತಹ ಪರಿಸ್ಥಿತಿಯ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸುವ ಸಿ.ಪಿ.ಐ. (ಎಂ) ಆಂಧ್ರ ರಾಜ್ಯ ಸಮಿತಿ ಕನಿಷ್ಠ ಈಗಲಾದರೂ ಚೆನ್ನಾರೆಡ್ಡಿ ಸರ್ಕಾರ ತನ್ನ ನಿಲುವಿನ ಅಪಾಯವನ್ನು ಮನಗಂಡು ಎಚ್ಚೆತ್ತುಕೊಂಡು ತನ್ನ ನಾಗರೀಕರನ್ನು ರಕ್ಷಿಸಲು, ನಾಗರೀಕ ಹಕ್ಕುಗಳ ಮರುಸ್ಥಾಪನೆ ಮಾಡಲು ಕ್ರಮಕೈಗೊಳ್ಳಬೇಕೆಂದು ಎಚ್ಚರಿಸಿದೆ.

ಕೇವಲ ವಿರೋಧ ಪಕ್ಷಗಳನ್ನು ಸದೆಬಡಿಯುವುದರಲ್ಲೇ ಮಗ್ನವಾಗಿ ಇತರ ರಂಗಗಳಲ್ಲಿ ಅದು ತಳೆದಿರುವ ಜನವಿರೋಧಿ ನಿಲುವುಗಳನ್ನು ಬಿಟ್ಟು ಕೆಲವು ತುರ್ತ ಕ್ರಮಗಳನ್ನು ಕೈಗೊಳ್ಳಬೇಕು.

ಸುಪ್ರೀಂ ಕೋರ್ಟಿನ ಆದೇಶದತೆ ಹಿನ್ನೆಲೆಯಲ್ಲಿ ಭೂ ಪರಿಮಿತಿ ಶಾಸನದ ತಿದ್ದುಪಡಿ. ಕಂಟ್ರಾಕ್ಟ್ ಕಾರ್ಮಿಕರನ್ನು ನಿಯಮಿತಗೊಳಿಸುವುದು. ಮುಚ್ಚಿದ ಕಾರ್ಖಾನೆಗಳನ್ನು ತೆರೆಯುವುದು. ಬುಡಕಟ್ಟು ಪ್ರದೇಶಗಳಲ್ಲಿ ಭೂವಿತರಣೆ. 10 ಸಾವಿರ ರೂ ವರೆಗಿನ ಸಾಲಮನ್ನಾ. ಹೆಚ್ಚಿಸಿರುವ ನೀರಿನ ತೆರಿಗೆಯಲ್ಲಿ ಇಳಿತ-ಈ ಎಲ್ಲಾ ಬೇಡಿಕೆ ಗಳನ್ನು ಕಾಂಗ್ರೆ ಆಡಳಿತದಲ್ಲಿ ಜನತೆಯ ಸಮಸ್ಯೆಗಳನ್ನು ಎತ್ತಿತೋರಿಸಲು ಜೂನ್ 7 ರಂದು ಸಿ.ಪಿ.ಐ. (ಎಂ) ಒಂದು ದೊಡ್ಡ ರ್‍ಯಾಲಿ ನಡೆಸಿ ಸರಕಾರವನ್ನು ಎಚ್ಚರಿಸಲು ನಿರ್ಧರಿಸಿದೆ.

ಕಾಶ್ಮೀರ: ರಾಜ್ಯಪಾಲರ ಬದಲಾವಣೆಯ ನಂತರ

ಈಗ ರಾಜಕೀಯ ಪ್ರಕ್ರಿಯೆಯೂ ಆರಂಭವಾಗಬೇಕು

(ಪೀಪಲ್ಸ್ ಡೆಮಾಕ್ರಸಿ ಸಂಪಾದಕೀಯ)

ಭಾರತ ಒಕ್ಕೂಟದ ಚೌಕಟ್ಟಿನೊಳಗೆ ಕಾಶ್ಮೀರ ಸಮಸ್ಯೆಯ ಪರಿಹಾರದ ಕುರಿತು ಆಸಕ್ತಿ ತೋರಿದ್ದ ಮಿರ್ ವಾಯ್ಝ್ ಫಾರುಕ್‌ರ ಅಮಾನುಷ ಕೊಲೆ ಮತ್ತೊಮ್ಮೆ ಕಾಶ್ಮೀರಿ ಪ್ರತ್ಯೇಕವಾದಿಗಳ ಹತಾಶ ಪಡೆಗಳ ದುಷ್ಟ ಪಿತೂರಿಯನ್ನು ತೋರಿಸಿಕೊಟ್ಟಿದೆ. ಈ ಕೊಲೆ ಸಾಮಾನ್ಯ ಕಾಶ್ಮೀರಿಗಳಲ್ಲಿ ಬಹಳಷ್ಟು ಕ್ರೋಧ ಹುಟ್ಟಿಸಿತ್ತು. ಪ್ರತ್ಯೇಕತಾವಾದಿಗಳನ್ನು ದೂರತಳ್ಳುವ ಪ್ರಕ್ರಿಯೆ ಇದರಿಂದ ಆರಂಭವಾಗಬಹುದಾಗಿತ್ತು. ಆದರೆ ಮಾಲ್ವಿ ಫಾರುಕ್‌ರ ಅಂತಿಮ ಸಂಸ್ಕಾರಕ್ಕೆ ಸೇರಿದ್ದವರ ಮೇಲೆ ಗುಂಡು ಹಾರಿಸಿ ಹತ್ತಾರು ಮುಗ್ಧರ ಕೊಲೆಯ ವಿಚಾರ ಶೂನ್ಯ ಕೃತ್ಯದಿಂದಾಗಿ ಈ ಪ್ರಕ್ರಿಯೆ ಆರಂಭವಾಗುವುದು ಸಾಧ್ಯವಾಗಲಿಲ್ಲ. ವಾಸ್ತವವಾಗಿ ಈ ಗೋಲೀಬಾರು ಮಿರ್ ವ್ಯಾಯ್ಝ್‌ರಿಗೆ ಹಲವು ಬಾರಿ ಬೆದರಿಕೆ ಹಾಕಿ ಕೊನೆಗೂ ಅವರನ್ನು ಮುಗಿಸಿದ ಜಮಾತ್-ಎ-ಇಸ್ಲಾಮಿಯ ಸಶಸ್ತ್ರ ವಿಭಾಗವಾದ ಹಿಝ್ಬು-ಉಲ್-ಮುಜಾಹಿದೀನ್‌ನನ್ನು ಬಲಪಡಿಸಿದೆಯಷ್ಟೆ.

ಕಾಶ್ಮೀರದಲ್ಲಿನ ರಾಜಕೀಯ ಶಕ್ತಿಗಳ ಬಗ್ಗೆ ಅರಿಯುವ ಪ್ರೌಢತೆಯಾಗಲಿ, ರಾಜಕೀಯ ಸೂಕ್ಷ್ಮ ವಿವೇಚನೆಯಾಗಲೀ ರಾಜ್ಯಪಾಲ ಜಗನ್ಮೋಹನ್‌ರಲ್ಲಿರಲಿಲ್ಲ. ಅವರು ಹೆಚ್ಚೆಂದರೆ ಕ್ರೌರ್ಯಕ್ಕೆ ಹೆಸರಾದ ಒಬ್ಬ ಪೋಲೀಸ್, ಭ್ರಷ್ಟ ರಾಜಕಾರಣಿಗಳ ಕೊಂಡು ಕೊಳ್ಳುವ ವ್ಯಾಪಾರಿಯಷ್ಟೆ. ಕಾಶ್ಮೀರದ ಈಗಿನ ಪರಿಸ್ಥಿತಿಗೆ ಅದೆಷ್ಟೋ ಹೆಚ್ಚಿನ ಮಟ್ಟದ ನೈಪುಣ್ಯಬೇಕು.

ಕಳೆದ ಕೆಲವು ತಿಂಗಳಲ್ಲಿ ತೀವ್ರವಾಗಿ ಹದಗೆಡುತ್ತಿದ್ದ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸಲಾರಂಭಿಸಿತು ಎಂಬುದು ನಿಜ. ಇಡೀ ಆಡಳಿತ ಕೊಳೆಯುತ್ತಿದ್ದುದನ್ನು ಸ್ವಲ್ಪ ಮಟ್ಟಿಗೆ ತಡೆ ಹಿಡಿದಂತಾಗಿತ್ತು. ಆಡಳಿತವೆಂಬುದೊಂದಿದೆ ಎಂಬುದು ಕಾಣಲಾರಂಭಿಸಿತ್ತು. ಆದ್ದರಿಂದಲೇ ಈ ಬಗ್ಗೆ ಹೆಚ್ಚು ಜಾಗರೂಕತೆ ಅಗತ್ಯ.

ದೀರ್ಘವಾದ ರಾಜಕೀಯದಲ್ಲಿನ ಕ್ರಿಮಿನಲ್ ಪಗಡೆಯಾಟ, ದುರಾಡಳಿತ, ಸರ್ವಾಧಿಕಾರ, ಭ್ರಷ್ಟಾಚಾರ ಇವೆಲ್ಲವುಗಳಿಂದ ಕ್ಲಿಷ್ಟವಾದ ಕಾಶ್ಮೀರದ ಸನ್ನಿವೇಶದಲ್ಲಿ ಅಲ್ಲಿಯ ಜನರ ಪ್ರಾಮಾಣಿಕ ಆಕಾಂಕ್ಷೆಗಳು, ಸಮಸ್ಯೆಗಳು ತೀರಾ ನಿರ್ಲಕ್ಷ್ಯಕ್ಕೆ ಒಳಗಾದವು.

> ಕಾಶ್ಮೀರದಲ್ಲಿನ ರಾಜಕೀಯ ಶಕ್ತಿಗಳ ಬಗ್ಗೆ ಅರಿಯುವ ಪ್ರೌಢತೆಯಾಗಲಿ, ರಾಜಕೀಯ ಸೂಕ್ಷ್ಮ ವಿವೇಚನೆಯಾಗಲೀ ರಾಜ್ಯಪಾಲ ಜಗನ್ಮೋಹನ್‌ರಲ್ಲಿರಲಿಲ್ಲ.

ರಾಜ್ಯದ ಸ್ವಾಯತ್ತತೆ ಕರಗಿ ಹೋಗಲಾರಂಭಿಸಿತು. ಇದರ ಜತೆಗೆ ರಾಷ್ಟ್ರೀಯ ಮಟ್ಟದಲ್ಲಿ ಹಿಂದೂ ಕೋಮುವಾದ ತಲೆಯೆತ್ತಿದ್ದು ಪರಿಸ್ಥಿತಿಯನ್ನು ಇನ್ನಷ್ಟು ಕ್ಲಿಷ್ಟಗೊಳಿಸಿತು. ಕಲಮು 370 ರ ಮೇಲೆ ಬಿ.ಜೆ.ಪಿ. ಆಲಾಪ ಮತ್ತಷ್ಟು ಹೊಡೆತ ನೀಡಿತು.

ಇಂದು ಕಾಶ್ಮೀರದ ಸನ್ನಿವೇಶದಲ್ಲಿ ಪ್ರತ್ಯೇಕತಾವಾದಿ ಶಕ್ತಿಗಳೊಂದಿಗೆ ಕಟ್ಟುನಿಟ್ಟಾಗಿ ವರ್ತಿಸುವುದಲ್ಲದೆ ಬೇರೆ ದಾರಿಯಿಲ್ಲ. ಆದರೆ ಅದೇ ವೇಳೆಗೆ

> ಭಾರತ ಸರ್ಕಾರ ಮತ್ತು ಎಡ-ಜಾತ್ಯತೀತ ಶಕ್ತಿಗಳ ಬಹುಮುಖೀ ಒತ್ತಡ ಕಾಶ್ಮೀರವನ್ನು ಉಳಿಸಬಲ್ಲದು. ಈ ಕರ್ತವ್ಯ ನಿರ್ವಹಣೆಯಲ್ಲಿ ಇನ್ನಷ್ಟು ವಿಳಂಬ ಅಪಾಯಕಾರಿ.

ಇದುವರೆಗೆ ಅನುಸರಿಸಿದ ಧೋರಣೆಗಳ ಆಮುಲಾಗ್ರ ವಿಮರ್ಶೆ ನಡೆಸಬೇಕು. ಕಾಶ್ಮೀರ ಸಮಸ್ಯೆಯ ಪರಿಹಾರಕ್ಕೆ ತಕ್ಷಣದ ಮತ್ತು ದೀರ್ಘಕಾಲದ ಕ್ರಮಗಳನ್ನು ಕಂಡು ಹಿಡಿದು ನಿರ್ದಿಷ್ಟಗೊಳಿಸುವ ಕೆಲಸ ಈಗಲೇ ಆರಂಭವಾಗಬೇಕು. ಮೊದಲ ಹೆಜ್ಜೆಯಾಗಿ, ಈ ಸಮಸ್ಯೆಯ ರಾಜಕೀಯ ಪರಿಹಾರಕ್ಕೆ ಸಿದ್ಧವಿರುವ ಗುಂಪುಗಳೊಡನೆ ಮಾತುಕತೆ ಆರಂಭಿಸಬೇಕು. ಹೊಸ ಉದ್ಯೋಗಾವಕಾಶ ನಿರ್ಮಿಸುವ ಸಮಾಜದ ವಿವಿಧ ಸ್ತರಗಳ ಇತರ ಆರ್ಥಿಕ ಬೇಡಿಕೆಗಳನ್ನು ಈಡೇರಿಸಲು ಸಾಧ್ಯವಾಗುವಂತೆ ರಾಜ್ಯದ ಆರ್ಥಿಕವನ್ನು ಪುನರ್ರಚಿಸುವ ಒಂದು ವಿವರವಾದ ಯೋಜನೆ ರೂಪಿಸಬೇಕು. ರಾಜಕೀಯ, ಆರ್ಥಿಕ, ಎರಡೂ ರಂಗಗಳಲ್ಲಿ ಒಂದು ಹೊಸ ನಿಲುವಿನಿಂದ ಮುಂದಡಿಯಿಡಬೇಕಾಗಿದೆ. ಅದೇ ವೇಳೆಗೆ ಬುಡಮೇಲುಗಾರರ ವಿರುದ್ಧದ ಕ್ರಮಗಳಲ್ಲಿ ಯಾವ ಹಿಂಜರಿಕೆಯು ಕಾಣಬಾರದು.

ಕಾಶ್ಮೀರ ಸಮಸ್ಯೆಯ ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಪರಿಣಾಮಗಳ ಸೂಕ್ತ ಪರಿಜ್ಞಾನ ಇಟ್ಟುಕೊಂಡು ಒಂದೆಡೆ ರಾಜತಾಂತ್ರಿಕ ಕ್ರಮಗಳ ಮೂಲಕ ವಿಶ್ವ ಸಾರ್ವಜನಿಕ ಅಭಿಪ್ರಾಯದ ಬೆಂಬಲ ದೊರೆಯುವಂತೆ ಯತ್ನ ಮುಂದುವರಿಸಬೇಕು. ಇನ್ನೊಂದೆಡೆ ಆಂತರಿಕವಾಗಿ ಹಿಂದೂ ಕೋಮುವಾದಿಗಳ ಪ್ರಭಾವವನ್ನೂ ಗಟ್ಟಿಯಾಗಿ ಎದುರಿಸಬೇಕು.

ಇಲ್ಲಿ ಎಡ ಪಕ್ಷಗಳ ಜವಾಬ್ದಾರಿಯೂ ದೊಡ್ಡದು. ಜಮ್ಮುಕಾಶ್ಮೀರದಲ್ಲಿ ಅವರ ಪ್ರಭಾವ ಅತ್ಯಲ್ಪವಾದರೂ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ನಿಕಟ ಒಂದು ಕೋಮುವಾದಿಗಳ ವಿಷಪೂರಿತ ಪ್ರಚಾರವನ್ನು ತಡೆಗಟ್ಟಲು ರಾಷ್ಟ್ರೀಯ ಮಟ್ಟದಲ್ಲಿ ಗಟ್ಟಿ ಕ್ರಮಗಳನ್ನು ಕೈಗೊಳ್ಳಬೇಕು.

ಭಾರತ ಸರ್ಕಾರ ಮತ್ತು ಎಡ-ಜಾತ್ಯತೀತ ಶಕ್ತಿಗಳ ಬಹುಮುಖೀ ಒತ್ತಡ ಕಾಶ್ಮೀರವನ್ನು ಉಳಿಸಬಲ್ಲದು. ಈ ಕರ್ತವ್ಯ ನಿರ್ವಹಣೆಯಲ್ಲಿ ಇನ್ನಷ್ಟು ವಿಳಂಬ ಅಪಾಯಕಾರಿ.



ಮೀರ್‌ವಾಯಿಜ್ ಕೊಲೆಗೆ ಕಾಶ್ಮೀರಿಗಳ ಪ್ರತಿಭಟನೆ

ತ್ರಿಪುರಾ: ಜಿಲ್ಲಾ ಸ್ವಾಯತ್ತ ಮಂಡಳಿಗೆ ಚುನಾವಣೆ

1988 ರ ಪುನರಾವರ್ತನೆಗೆ ಕಾಂಗ್ರೆ ತಯ್ಯಾರಿ

1988 ರ ಫೆಬ್ರುವರಿಯಲ್ಲಿ ಆಗಿನ ಕೇಂದ್ರ ಸರ್ಕಾರದ ಅಧಿಕಾರದ ದುರುಪಯೋಗದಿಂದ ವ್ಯಾಪಕ ಮೋಸದ ಮೂಲಕ ಅಧಿಕಾರ ಕಸಿದು ಕೊಂಡ ನಂತರ ನಡೆದ ಉಪ ಚುನಾವಣೆಗಳಲ್ಲೂ, ಲೋಕಸಭಾ ಚುನಾವಣೆಗಳಲ್ಲೂ ಅದರ ಪುನರಾವರ್ತನೆ ಮಾಡಿದ ತ್ರಿಪುರಾದ ಕಾಂಗ್ರೆ ಟಿ.ಯು.ಜೆ.ಎಸ್. ಕೂಟ ಜುಲೈ 8 ರಂದು ತ್ರಿಪುರಾ ಬುಡಕಟ್ಟು ಪ್ರದೇಶ ಸ್ವಾಯತ್ತ ಜಿಲ್ಲಾ ಮಂಡಳಿ ಚುನಾವಣೆಗಳಲ್ಲೂ ಪೂರ್ಣವಾಗಿ ಮೋಸ ನಡೆಸಲು ಸಕಲ ಸಿದ್ಧತೆಯಲ್ಲಿ ತೊಡಗಿದೆ. ಆದ್ದರಿಂದ ಈ ಚುನಾವಣೆಗಳಲ್ಲಿ ಮುಕ್ತ ಹಾಗೂ ನ್ಯಾಯ ಮತದಾನ ನಡೆಯುವಂತೆ ಮಾಡಲು ಏಳು ಅಂಶಗಳ ಕಾರ್ಯಾಚರಣೆ ನಡೆಸಬೇಕೆಂದು ತ್ರಿಪುರಾ ಎಡರಂಗ ಒತ್ತಾಯಿಸಿದೆ. ಎಲ್ಲಾ ಸಬ್ ಡಿವಿಜನ್‌ಗಳಲ್ಲಿ ಕೇವಲ ಐ.ಎ.ಎಸ್. ಆಫೀಸರುಗಳನ್ನು ಚುನಾವಣಾ ಅಧಿಕಾರಿಗಳಾಗಿ ನೇಮಿಸುವುದು, ಇತ್ತೀಚೆಗೆ ಹರ್ಯಾಣಾ ಉಪಚುನಾವಣೆಗಳಂತೆ ಕೇವಲ ಕೇಂದ್ರ ಸರ್ಕಾರದ ಸಿಬ್ಬಂದಿಯವರನ್ನು ಚುನಾವಣಾ ಅಧಿಕಾರಿಗಳಾಗಿ ನೇಮಿಸುವುದು, ಕೊಲೆ ಅತ್ಯಾಚಾರ ಬಹಿರಂಗ ಆಪಾದನೆಯಿರುವ ಪೋಲೀಸ್ ಅಧಿಕಾರಿಗಳನ್ನು ಸ್ವಾಯತ್ತ ಜಿಲ್ಲಾ ಮಂಡಳಿ ಪ್ರದೇಶಗಳಿಂದ ಆಚೆಗೆ ಕಳುಹಿಸುವುದು, ಚುನಾವಣಾ ಕಾಲದ ಭದ್ರತಾ ವ್ಯವಸ್ಥೆಗೆ ಕೇಂದ್ರದ ಅರೆ ಸೈನಿಕ ಪಡೆಗಳನ್ನಷ್ಟೇ ಬಳಸುವುದು, ಮೇ 4 ರ ಜೈಲ್ ಭರೋ ಕಾರ್ಯಕ್ರಮದ ಸಮಯದಲ್ಲಿ ಹೇರಿದ ಸುಳ್ಳು ಮೊಕದ್ದಮೆಗಳ ರದ್ಧತಿ ಮತ್ತಿತರ ಬೇಡಿಕೆಗಳನ್ನು ಎಡರಂಗ ಮುಂದಿಟ್ಟಿದೆ.

ಮೇ 4 ರಂದು ಬುಡಕಟ್ಟು ಕಾಲಿಕಾಪುರ ಪೋಲೀಸ್ ಔಟ್‌ಪೋಸ್ಟಿನಿಂದ. ಕೆಲವು ಬುಡಕಟ್ಟು ಉಗ್ರಗಾಮಿಗಳು ಏಳು ರೈಫಲ್‌ಗಳನ್ನು ಅಪಹರಿಸಿದ್ದಾರೆ. ಇದು ಪೋಲೀಸರ ಪರೋಕ್ಷ ನೆರವಿನಿಂದಲೇ ನಡೆದಿದೆಯೆಂಬ ಬಗ್ಗೆ ಆತಂಕ ವ್ಯಕ್ತಪಡಿಸಿರುವ ಎಡರಂಗ ಆ ರೈಫಲ್‌ಗಳನ್ನು ಮರಳಿ ಪಡೆಯಲು ತೀವ್ರ ಪ್ರಯತ್ನ ನಡೆಸಬೇಕೆಂದೂ ಒತ್ತಾಯಿಸಿದೆ. ಟಿ.ಎನ್.ಎಲ್.ಎಫ್‌ನ ಗುಂಪುಗಳು ಚುನಾವಣೆಗಳ ಸಮಯದಲ್ಲಿ ಗಲಭೆ ಎಬ್ಬಿಸಲು ಹೀಗೆ ಮಾಡಿರಬಹುದು. ಈ ಗುಂಪು ಸದರ್ ಪ್ರದೇಶದಲ್ಲಿ ಅಡ್ಡಾಡುತ್ತಿದ್ದು ಸರಕಾರ ಈ ರೈಫಲ್‌ಗಳನ್ನು ವಾಪಾಸು ಪಡೆಯಲು ಏನೂ ಪ್ರಯತ್ನ ನಡೆಸಿಲ್ಲ ಎಂದು ಎಡರಂಗ ಆಪಾದಿಸಿದೆ.

ಸಿ.ಪಿ.ಐ(ಎಂ), ಸಿ.ಪಿ.ಐ., ಆರ್.ಎಸ್.ಪಿ. ಹಾಗೂ ಫಾರ್ವರ್ಡ್‌ಬ್ಲಾಕ್‌ನ ಸದಸ್ಯರಿದ್ದ ನಿಯೋಗವೊಂದು ಈ ಚುನಾವಣೆಯ ಕಮಿಶನರ್ ಶ್ಯಾಮಲ್ ಘೋಷ್‌ರನ್ನು ಮೇ 24 ರಂದು ಭೇಟಿಯಾಗಿ ಮುಕ್ತ, ನ್ಯಾಯ ಚುನಾವಣೆಗೆ ಸರ್ವ ಪ್ರಯತ್ನ ನಡೆಸಬೇಕೆಂದು ಒತ್ತಾಯಿಸುತ್ತಾ ಹತ್ತು ಅಂಶಗಳ ಮನವಿ ಪತ್ರ ಸಲ್ಲಿಸಿದೆ. ಸಂಬಂಧಪಟ್ಟ ಮೂರು ಜಿಲ್ಲೆಗಳಿಗೆ ತಕ್ಷಣ ನವದೆಹಲಿಯಲ್ಲಿರುವ ಮುಖ್ಯ ಚುನಾವಣಾ ಕಮಿಶನರ್ ಮೂವರು ವೀಕ್ಷಕರನ್ನು ಕಳಿಸಬೇಕು. ಈ ವೀಕ್ಷಕರು ಮೋಸದಿಂದ ಮತದಾರ ಪಟ್ಟಿಯಲ್ಲಿ ಸೇರಿಸಿದ ಬಾಂಗ್ಲಾದೇಶಿಯರ ಹೆಸರನ್ನು ಕೈ ಬಿಡುವಲ್ಲಿ ನೆರವಾಗಬೇಕು. ಚುನಾವಣಾ ಫಲಿತಾಂಶ ಪ್ರಕಟವಾಗುವವರೆಗೆ ಅವರು ಇಲ್ಲಿರಬೇಕೆಂದು ಎಡರಂಗ ಒತ್ತಾಯಿಸಿದೆ.

ಅಲೀಗಢದಲ್ಲಿ ಸಮ್ಮೇಳನದ ಮೇಲೆ ಕೋಮುವಾದಿಗಳ ಹಲ್ಲೆ

ಮೇ 19 ರಂದು ಅಲೀಗಢದಲ್ಲಿ ಕೋಮುವಾದಿ ವಿರೋಧಿ ಸಮ್ಮೇಳನವೊಂದರ ಮೇಲೆ ಭಜರಂಗದಳ, ವಿ.ಹೆಚ್.ಪಿ. ಮತ್ತು ಬಿ.ಜೆ.ಪಿ. ಕಾರ್ಯಕರ್ತರು ಹಲ್ಲೆ ಮಾಡಿ ಸಮ್ಮೇಳನವನ್ನು ವಿಫಲಗೊಳಿಸಲು ಯತ್ನಿಸಿದರು. ಸ್ಥಳೀಯ ಎಂ.ಎಲ್.ಎ.ಯ ಮಗನ ನೇತೃತ್ವದಲ್ಲಿ ಸಮಾಜ ವಿರೋಧಿ ವ್ಯಕ್ತಿಗಳೂ ಭಾಗವಹಿಸಿದ್ದ ಈ ಹಲ್ಲೆಕೋರರು ಸಭಿಕರಿಂದ ತೀವ್ರ ಪ್ರತಿರೋಧ ಕಂಡಾಗ ಓಡಿಹೋಗಬೇಕಾಯಿತು. ಸಿ.ಪಿ.ಐ(ಎಂ) ಅಲೀಗಢ ಘಟಕ ಸಂಘಟಿಸಿದ್ದ ಈ ಸಮ್ಮೇಳನದಲ್ಲಿ ಆಗ ಸಿ.ಪಿ.ಐ(ಎಂ) ಎಂ.ಪಿ. ಸುಭಾಷಿಣಿ ಅಲಿ ಮಾತನಾಡುತ್ತಿದ್ದರು. ನಂತರ ಅವರು ಭಾಷಣ ಮುಂದುವರಿಸುತ್ತಾ ಬಿ.ಜೆ.ಪಿ.ಯ ಆಸಕ್ತಿ ರಾಮದೇವಸ್ಥಾನ ಕಟ್ಟುವಲ್ಲಿ ಅಲ್ಲ, ಅದನ್ನು ಬಳಸಿ ಎಲ್ಲಾ ಕೋಮುಗಳ ನಡುವೆ ವಿಭಜನೆ ತಂದು ಅಧಿಕಾರ ಕಿತ್ತುಕೊಳ್ಳುವಲ್ಲೇ ಅದಕ್ಕೆ ಆಸಕ್ತಿ ಎಂದು ಟೀಕಿಸಿದರು.

ಸಮ್ಮೇಳನದ ನಂತರ ಕೆಲವು ಬುದ್ಧಿಜೀವಿಗಳು ಒಂದು ಹೇಳಿಕೆ ನೀಡಿ ಕೋಮುವಾದಿಗಳ ಹಲ್ಲೆಯನ್ನು ಖಂಡಿಸುತ್ತಾ ಇತಿಹಾಸದ ಏನೂ ಮಹತ್ವವಿಲ್ಲದ ಘಟನೆಗಳನ್ನು ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ದೊಡ್ಡದು ಮಾಡುತ್ತಿದ್ದಾರೆ ಎಂದು ಟೀಕಿಸಿದ್ದಾರೆ.

ಸಿ.ಪಿ.ಐ(ಎಂ) ಉತ್ತರ ಪ್ರದೇಶ ರಾಜ್ಯ ಸಮಿತಿಯು ಈ ಬಗ್ಗೆ ಹೇಳಿಕೆ ನೀಡಿ, ಇದೊಂದು ಸಣ್ಣ ಘಟನೆಯೆಂದು ನಿರ್ಲಕ್ಷ ಮಾಡಲಾಗದು ಎನ್ನುತ್ತಾ ಡ್ಯೂಟಿಯ ಮೇಲಿದ್ದ ಎಸ್.ಐ. ಹಲ್ಲೆಕೋರರಿಗೆ ನೆರವಾಗಿದ್ದ ಎಂದು ಆಪಾದಿಸಿ ಆತನ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದೆ.

ತಮಿಳುನಾಡು: ಪೇಪರ್ ಮಿಲ್ ಕಾರ್ಮಿಕರ ಹೋರಾಟಕ್ಕೆ ಜಯ

ತಮಿಳುನಾಡಿನ ಸರಕಾರೀ ವಲಯದ ಸಂಸ್ಥೆಯೊಂದರಲ್ಲಿ ಕಾರ್ಮಿಕ ವಿರೋಧಿ ನೀತಿಯನ್ನು ವಿಫಲಗೊಳಿಸಿ, ಡಿ.ಎಂ.ಕೆ ಆಳ್ವಿಕೆಯಲ್ಲಿನ ಕಾರ್ಮಿಕ ವಿರೋಧಿ ಅಂಶದ ಬಗ್ಗೆ ಎಚ್ಚರ ನೀಡುವಲ್ಲಿ ತಮಿಳುನಾಡು ನ್ಯೂಸ್‌ಪ್ರಿಂಟ್ ಅಂಡ್ ಪೇಪರ್ ಲಿಮಿಟೆಡ್ (ಟಿ.ಎನ್.ಪಿ.ಎಲ್) ನ ಕಾರ್ಮಿಕರು ಯಶಸ್ವಿಯಾಗಿದ್ದಾರೆ.

ತಿರುಚಿನಾಪಳ್ಳಿ ಜಿಲ್ಲೆಯ ಕರೂರಿನಲ್ಲಿರುವ ಈ ಘಟಕದ ಕಾಂಟ್ರಾಕ್ಟ್ ಕಾರ್ಮಿಕರು ಡಿ.ಎಂ.ಕೆ. ಗೆ ಸೇರಿದ ಕಾರ್ಮಿಕ ಸಂಘದ

ದೇಶದೊಳಗೊಂದು ಸುತ್ತು

ನೇತೃತ್ವದಲ್ಲೇ ಮಾರ್ಚ್ ತಿಂಗಳಿಂದ ಹೋರಾಟ ನಡೆಸಿದ್ದರೂ ಡಿ.ಎಂ.ಕೆ.ಯ ಕಾರ್ಮಿಕ ಸಂಘಟನೆಯ ರಾಜ್ಯ ಮುಖಂಡತ್ವದ ವಂಚನೆಯಿಂದಾಗಿ ನಂತರ ಸಿ.ಐ.ಟಿ.ಯು. ಬೆಂಬಲದಿಂದ, ಕಾರ್ಖಾನೆಯ ಖಾಯಂ ಕಾರ್ಮಿಕರ ನೆರವು, ಸರಕಾರ, ಸೌಹಾರ್ದ ಕಾರ್ಯಕ್ರಮಗಳಿಂದಾಗಿ ಹೋರಾಟ ಮುಂದುವರೆಸಿದರು. ಹೋರಾಟವನ್ನು ವಿಫಲಗೊಳಿಸಲು ಆಡಳಿತ ವರ್ಗ ಹಾಗೂ ಡಿ.ಎಂ.ಕೆ.ಯ ಕೆಲವು ಕಾರ್ಮಿಕ ಮುಖಂಡರು ದಮನ, ಬೆದರಿಕೆ, ಆಮಿಷ ಇತ್ಯಾದಿ ಸಕಲ ಪ್ರಯತ್ನ ನಡೆಸಿದರೂ ಪ್ರಯೋಜನವಾಗದೆ ಕೊನೆಗೆ ಏಪ್ರಿಲ್ 24 ರಂದು ಲೇಬರ್ ಕಮಿಶನರ್ ಸಮ್ಮುಖ ಒಂದು ಒಪ್ಪಂದಕ್ಕೆ ಸಹಿ ಬಿತ್ತು.

ಈ ಇತ್ಯರ್ಥವೇ ಡಿ.ಎಂ.ಕೆ. ಸರ್ಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ನೀಡಿರುವ ಒಂದು ಸ್ಪಷ್ಟ ತೀರ್ಪು.

ಅಸಂಘಟಿತ ಕಾರ್ಮಿಕರಿಗೆ ಸಂಘಟಿತ ಕಾರ್ಮಿಕರು ಬೆಂಬಲ ನೀಡಿ ಗಳಿಸಿದ ಈ ಜಯ ಟಿ.ಎನ್.ಪಿ.ಎಲ್. ಕಾರ್ಮಿಕರ ಒಂದು ಮಹತ್ಸಾಧನೆ.

ಒರಿಸ್ಸಾ: ಸರಕಾರ ಬದಲಾದಲ್ಲಿ ಬದಲಾಗದ ಪೋಲೀಸ್ ಅಧಿಕಾರಿಗಳು

ಮೇ 9 ರಿಂದ 12 ರ ಮೂರು ದಿನಗಳವರೆಗೆ ಒರಿಸ್ಸಾ ರಾಜ್ಯದ ಸುಂದರ ಗಢ ಜಿಲ್ಲೆಯ ಕ್ವೊರಾ ಬ್ಲಾಕಿನಲ್ಲಿ ಗಿರಿಜನರ ಮೇಲೆ ಅವ್ಯಾಹತ ಅತ್ಯಾಚಾರ-ಲಾಠಿ ಪ್ರಹಾರ, ಬ್ಲಾಂಕ್ ಫೈರಿಂಗ್, ಮನೆಗಳ ಲೂಟಿ, ಪೋಲೀಸ್ ಲಾಕಪ್ಪುಗಳಲ್ಲಿ ಸಿ.ಐ.ಟಿ.ಯು. ಕಾರ್ಯಕರ್ತರಿಗೆ ಹಿಂಸೆ, ಗಿರಿಜನ ಯುವತಿಯರು, ಮಹಿಳೆಯರ ಮಾನಾಪಹರಣ ಮುಗ್ಧರ ಬಂಧನ, ಗಣಿಗಳ ಪ್ರದೇಶವಾದ ಇಲ್ಲಿ ಎಲ್ಲಾ ಕೆಲಸಗಳೂ ಸ್ಥಗಿತಗೊಂಡಿವೆ ಗಣಿ ಕೆಲಸ. ಅದುರು ಸಾಗಾಣಿಕೆಯೆಲ್ಲಾ ನಿಂತಿದೆ ಎಲ್ಲೆಡೆಯೂ ಭೀತಿಯ ವಾತಾವರಣ.

ಇದಕ್ಕೆ ಕಾರಣ ಇಬ್ಬರು ಕುಖ್ಯಾತ ಪೋಲೀಸ್ ಅಧಿಕಾರಿಗಳು. ಬೋನ್ಯಾ ಸಬ್ ಡಿವಿಜನ್ನಿನ ಡಿ.ಎಸ್.ಪಿ. ಮತ್ತು ಕ್ವೊರಾ ಪೋಲೀಸ್ ಸ್ಟೇಶನ್ನಿನ ಎಸ್.ಐ.

ಮೇ 5 ರಂದು ಸಿ.ಐ.ಟಿ.ಯು. ಕಾರ್ಯಕರ್ತ ರಾಮ ಪ್ರೀತ್ ಎಂಬಾತನಿಗೆ ಪೋಲೀಸ್ ಅಧಿಕಾರಿ ಸಾರ್ವಜನಿಕವಾಗಿ ಥಳಿಸಿ ಪೋಲೀಸ್ ಲಾಕಪ್ಪಿನಲ್ಲಿ ಮೂರು ದಿನ ಚಿತ್ರಹಿಂಸೆಗೆ ಒಳಪಡಿಸಿ ನಂತರ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ಸುದ್ದಿ ಕೇಳಿ ಸಿಟ್ಟಿಗೆದ್ದ ವಿವಿಧ ಗಣಿಗಳ ಕಾರ್ಮಿಕರು ಇದರ ವಿರುದ್ಧ ಪ್ರತಿಭಟಿಸಿದರು. ಇದಕ್ಕೆ ಎಸ್.ಐ. ಸೇಡು ತೀರಿಸಿಕೊಳ್ಳುವ ಕ್ರಮಕ್ಕಿಳಿದಾಗ ಕೆಲಸ ನಿಲ್ಲಿಸಿ ಪೋಲೀಸ್ ಸ್ಟೇಶನ್ನಿನೆದುರು ಧರಣಿ ಕೂತರು. ಅಲ್ಲಿಯೂ ಎಸ್.ಐ.ನ ಅನಾಗರಿಕ ವರ್ತನೆಯಿಂದಾಗಿ ಸಣ್ಣ ಗಲಭೆಯಾಯಿತು. ಇದನ್ನು ಅತಿ ರಂಜಿತಗೊಳಿಸಿ ಸಬ್ ಡಿವಿಜನ್‌ನ ಡಿಎಸ್‌ಪಿಗೆ ವರದಿ ಮಾಡಲಾಯಿತು. ಡಿ.ಎಸ್.ಪಿ. ದಾರಿಯಲ್ಲಿ ಬರುತ್ತಾ ಸಿಕ್ಕ ಗಿರಿಜನರನ್ನೆಲ್ಲಾ ಥಳಿಸಿಕೊಂಡು ಬಂದ. ಆಗಲೂ ಮೂರು ಸಾವಿರಕ್ಕೂ ಹೆಚ್ಚು ಗಿರಿಜನರು ಕಾಡುಗಳಲ್ಲಿ ಅಡಗಿ ಕೂರಬೇಕಾದ ಪರಿಸ್ಥಿತಿ.

ಕಳೆದ ಎರಡು ಮೂರು ವರ್ಷಗಳಲ್ಲಿ ಸಿಪಿಐ (ಎಂ) ಪಕ್ಷಮತ್ತು ಸಿ.ಐ.ಟಿ.ಯು ಈ ಇಬ್ಬರು ಕ್ರೂರಿಗಳ ವಿರುದ್ಧ ಉನ್ನತ ಅಧಿಕಾರಿಗಳಿಗೆ ಹಲವಾರು ದೂರು ನೀಡಿದ್ದರೂ ಸ್ಪಳೀಯನಾದ, ಈಗ ಮಾಜಿಯಾಗಿರುವ ಕಾಂಗ್ರೆ ಎಂ.ಎಲ್.ಎ. ಯಿಂದಾಗಿ ಅವರ ಕಾಡು ವರ್ತನೆ ಮುಂದುವರಿಯುತ್ತಲೇ ಬಂದಿದೆ. ಸರಕಾರ ಬದಲಾದ ಮೇಲೂ ಅದು ಬದಲಾದಂತಿಲ್ಲ. ಈಗ ಇಂತಹ ದಬ್ಬಾಳಿಕೆಯ ವರ್ತನೆಯ ಮೂಲಕ ಸರಕಾರದ ಹೆಸರಿಗೆ ಮಸಿ ಬಳಿಯುವುದೂ ಇಂತಹ ಪೋಲೀಸ್ ಅಧಿಕಾರಿಗಳ ಉದ್ದೇಶ.

ಆದಿವಾಸಿಗಳ ಮುಷ್ಕರ ಈ ಅತ್ಯಾಚಾರಗಳ ವಿರುದ್ಧ ಮುಂದುವರೆಯುತಿದೆ.

ತ್ರಿಪುರಾದಲ್ಲಿ [illegible] ಏನೂ ಆಗ್ಲ[illegible]

ಮೇಹಂನ ಘಟನೆಗಳ ನಂತರ ರಾಜಕೀಯದಲ್ಲಿ ಮೌಲ್ಯಗಳ ಬಗ್ಗೆ ಮಾತನಾಡುತ್ತಾ ಸರ್ಕಾರದ ರಾಜೀನಾಮೆ ಕೇಳಿರುವ ರಾಜೀವ್‌ಗಾಂಧಿಯ ಗೋಸುಂಬೆತನವನ್ನು ತ್ರಿಪುರಾದ ಸಿ.ಪಿ.ಐ.(ಎಂ) ರಾಜ್ಯ ಸೆಕ್ರೆಟಾರಿಯೆಟ್‌ನ ಹೇಳಿಕೆಯೊಂದು ಗೇಲಿ ಮಾಡುತ್ತಾ ತ್ರಿಪುರಾದಲ್ಲಿ ಕಾಂಗ್ರೆ ಟಿ.ಯು.ಜೆ.ಎಸ್. ಆಳ್ವಿಕೆಯಲ್ಲಿ ಮೊದಲು ಫತಿಕ್‌ರಾಯ್ ಉಪ ಚುನಾವಣೆಯಲ್ಲಿ, ನಂತರ ಲೋಕಸಭಾ ಚುನಾವಣೆಯಲ್ಲಿ ಮತ್ತು ಇತ್ತೀಚಿನ ಸಿಮ್ನಾ ಉಪ ಚುನಾವಣೆಯಲ್ಲಿ ನಡೆಸಿದ ಸಂಸದೀಯ ಪ್ರಜಾಸತ್ತೆಯ ಕೊಲೆಗೆ ಸಮನಾದ ಕ್ರಿಮಿನಲ್ ರಾಜಕೀಯ ಬೇರಿಲ್ಲ ಎಂದು ಟೀಕಿಸಿದೆ.

ಟಿ.ಎನ್.ವಿ. ಮುಖಂಡ ಹ್ವಾಂಗ್. ಖಾವ್ಲ್ ಜತೆ ಗುಪ್ತ ವ್ಯವಹಾರ ನಡೆಸಿ ಒಂಭತ್ತು ಮುಗ್ಧ ಬಂಗಾಲಿಗಳನ್ನು ಕೊಂದು, ನಂತರ ಅದೇ ನೆಪದಲ್ಲಿ ಚುನಾವಣೆಗಳ ನಾಲ್ಕು ದಿನಗಳ ಮೊದಲು ಎಡರಂಗ ಸರಕಾರಕ್ಕೆ ತಿಳಿಯದಂತೆ ಸೇನೆ ತಂದು ನಿಲ್ಲಿಸಿದ ರಾಜೀವಗಾಂಧಿ ಸಂಸದೀಯ ಪ್ರಜಾಪ್ರಭುತ್ವದ ಕೊಲೆ ಮಾಡಿದ್ದಕ್ಕಲ್ಲವಾದರೂ, ಕನಿಷ್ಠ ಈ ವಂಚನೆಗಾದರೂ ರಾಜೀನಾಮೆ ನೀಡಬೇಡವೇ? ರಾಜಕೀಯವನ್ನು ಕ್ರಿಮಿನಲ್‌ಮಯಗೊಳಿಸಿರುವ ಸಂತೋಷ ಮೋಹನ್ ದೇಬ್, ಕೆ.ಬಿ.ಆರ್. ದೇಬ್ ಬರ್ಮಾ ತಮ್ಮ ಲೋಕಸಭಾ ಸ್ಥಾನಗಳಿಗೆ ರಾಜೀನಾಮೆ ಕೊಡಬೇಕೆಂದು ಕೇಳಬೇಕಲ್ಲವೇ? ಸುಧೀರರಂಜನ್ ಮಜುಂದಾರ್ ತನ್ನ ಮುಖ್ಯಮಂತ್ರಿ ಪದವಿಗೆ ಇದೇ ಕಾರಣಕ್ಕಾಗಿ ರಾಜೀನಾಮೆ ಕೊಟ್ಟು ತ್ರಿಪುರಾದ ಕಾಂಗ್ರೆ ಟಿ.ಯು.ಜೆ.ಎಸ್. ಕೂಟ ಸರಕಾರ ವಜಾ ಆಗಬೇಕಲ್ಲವೇ? ಎಂದು ತ್ರಿಪುರಾ ರಾಜ್ಯ ಸೆಕ್ರೆಟಾರಿಯೇಟ್‌ನ ಹೇಳಿಕೆ ಪ್ರಶ್ನಿಸಿದೆ.

ರಾಜೀವ ಗಾಂಧಿಯವರ ಈ ಗೋಸುಂಬೆತನವನ್ನು ಖಂಡಿಸುತ್ತಾ ಜನತಾದಳ ಚೌಟಾಲಾ ರಾಜೀನಾಮೆ ಕೊಡಬೇಕೆಂದು ನಿರ್ಧರಿಸಿರುವುದನ್ನು ಪ್ರಶಂಸಿಸಿದೆ.

ಕೋಮುವಾದಿಗಳಿಂದ ದೇಶದ ರಕ್ಷಣೆಗೆ ಆಂದೋಲನ

ನಿರ್ಧಾರಕ್ಕೆ ದನಿ ನೀಡಿದರು. ಎಡಪಕ್ಷಗಳ ಬೆಂಬಲವಿಲ್ಲದೆ ಶಂಕರಾಚಾರ್ಯರ ಬಂಧನದ ನಿರ್ಧಾರ ಸಾಧ್ಯವಿರಲಿಲ್ಲ ಎಂದ ಅವರು ವಿಶೇಷವಾಗಿ ಸಿ.ಪಿ.ಐ. (ಎಂ) ಪೊಲಿಟ್‌ಬ್ಯುರೋ ಸದಸ್ಯ ಸುರ್ಜಿತ್ ಹಾಗೂ ಜನತಾದಳ ಮುಂದಾಳು ಚಂದ್ರಶೇಖರ್‌ರವರಿಗೆ ಕೃತಜ್ಞತೆ ವ್ಯಕ್ತ ಪಡಿಸಿದರು.

ಎಡ ಪಕ್ಷಗಳು ಸ್ಪಷ್ಟವಾಗಿ ಜಾತ್ಯತೀತರು ಅತ್ತ ಕೋಮುವಾದಿ ಶಕ್ತಿಗಳೂ ಬಹಿರಂಗವಾಗಿಯೇ ಕೋಮುವಾದಿಗಳು. ಅವರ ವಿರುದ್ಧ ಹೋರಾಟ ಸುಲಭ. ಆದರೆ ರಾಜಕೀಯದಲ್ಲಿ ಅಬ್ಬಂದಿತನ [illegible] ಅನುಸರಿಸು ರುವ [illegible] ದಿನಗಳು ಅತ್ಯಂತ ಅಪಾಯ ವವರ ವಿರುದ್ಧ ಹೋರಾಟ ಮಾತ್ರ ಕಷ್ಟ ಎಂದು ನಿರ್ದಿಷ್ಟ ರಾಜಕೀಯ ಪಕ್ಷವನ್ನು ಹೆಸರಿಸದೆ ಟೀಕಿಸಿ ಈ ವಿಷಯದಲ್ಲಿ ಒಂದು ಸ್ಪಷ್ಟ ನಿಲುಮೆಯ ಅಗತ್ಯದ ಮಹತ್ವವನ್ನು ಒತ್ತಿ ಹೇಳಿದರು. ಕೋಮುಸೌಹಾರ್ದ ಕಾಪಾಡುವಲ್ಲಿ ಬಹುಸಂಖ್ಯಾತ ಕೋಮಿನದ್ದು ವಿಶೇಷ ಜವಾಬ್ದಾರಿ ಎಂದು ನೆನಪಿಸಿದರು.

ಸ್ಪಷ್ಟ ನಿಲುಮೆಯ ಅಗತ್ಯದ ಮೇಲೆ ಸುರ್ಜಿತ್‌ರವರೂ ಒತ್ತು ನೀಡುತ್ತಾ ಸರಕಾರವೊಂದೇ ಈ ಸಮಸ್ಯೆ ಬಗೆಹರಿಸ ಲಾರದು. ಜನರ ಪಾತ್ರವು ಅನಿವಾರ್ಯ. ಪರಿಸ್ಥಿತಿ ಹೀಗೇ ಮುಂದುವರಿದರೆ ಬರಲಿ ರುವ ದಿನಗಳು ಅತ್ಯಂತ ಅಪಾಯ ಕಾರಿ ಎಂದರು. ನಮ್ಮ ದೇಶದ ಗಡಿಗಳು ಈಗ ಬಹಳ ಅಭದ್ರ ಎಂಬುದನ್ನು ಕೆಲವು ರಾಜಕೀಯ ಪಕ್ಷಗಳಿಗೆ ಈಗಲೂ ಅರಿವಾದ ಂತಿಲ್ಲ ಎಂದ ಸುರ್ಜಿತ್ ರಾಷ್ಟ್ರದ ಕರೆಯನ್ನು ಖಂಡಿಸಿದರು.

> ಜಾತ್ಯತೀತತೆಯೆಂದರೆ ಧರ್ಮವನ್ನು ರಾಜ ಕೀಯದಿಂದ ಪ್ರತ್ಯೇಕಿಸುವುದು. ಇದು ನಮ್ಮ ಸ್ವಾತಂತ್ರ ಹೋರಾಟದ ಸತ್ವ. ಸಂವಿಧಾನಕ್ಕೆ ಆಧಾರವಾದ ಸತ್ವ

ರಾಜ್ಯ ಕಿತ್ತುಕೊಳ್ಳಲು ರಾಮನ ಹೆಸರಿನ ಬಳಕೆಯೇ ಬಿ.ಜೆ.ಪಿ.ಯ ರಾಮರಾಜ್ಯ ಎಂದು ಸುರ್ಜಿತ್ ವರ್ಣಿಸಿದರು. ದಿಟ್ಟ ಕ್ರಮ ಕೈ ಗೊಂಡ ಉತ್ತರ ಪ್ರದೇಶ ಮುಖ್ಯ ಮಂತ್ರಿಗಳನ್ನು ಅಭಿನಂದಿಸುತ್ತಾ ಸುರ್ಜಿತ್ " ಆದರೆ ಇಲ್ಲಿ ಏಕಾಂಗಿ ಹೋರಾಟ ಸಾಧ್ಯವಿಲ್ಲ. ಜಾತ್ಯತೀತತೆಯ ಬಾವುಟ ಮೇಲೆತ್ತಿ ಹಿಡಿದು ಒಂದು ಜನತಾ ಆಂದೋಲನ ಕಟ್ಟಲೇ ಬೇಕೆಂದರು".

ಇಂದಿನ ರಾಜಕೀಯದ ಪ್ರಶ್ನೆಯಷ್ಟೇ ಅಲ್ಲ ದೇಶದ ಸಮಗ್ರತೆ ಉಳಿಯುತ್ತದೆಯೇ ಎಂಬ ಪ್ರಶ್ನೆ ಎಂದು ಸಮಾವೇಶದ **ಪ್ರಮುಖ ನಿರ್ಣಯ ಮಂಡಿಸುತ್ತಾ ಹೇಳಿದ ಚಂದ್ರಶೇಖರ್ ಬಾಬ್ರಿ ಮಸೀದಿಯ ಜಾಗದಲ್ಲಿ ರಾಮ ಜನ್ಮ ಭೂಮಿಯ ಬೇಡಿಕೆ ಯೆತ್ತುವವರೇ ಕೇಳಿ ನಿಮ್ಮ ದೇವಸ್ಥಾನ ಸಂಯುಕ್ತ ಭಾರತದಲ್ಲಿ ಸಾಧ್ಯವಿಲ್ಲ ಒಂದು ವಿಭಜಿತ** [illegible] ಎಂದರು.

ಜಾತ್ಯತೀತತೆ ಎಂದರೇನು? ಎಲ್.ಕೆ. ಆದ್ವಾಣಿ ತಿಳಿಯ ಬಯಸುತ್ತಾರಂತೆ. ಅವರು

> ಕೋಮು ಸೌಹಾರ್ದದ, ದೇಶದ ಐಕ್ಯತೆಯ ಪರಪಂಪರೆಯನ್ನು ನೆನಪಿಸುವ ಕೆಲಸ ಎಲ್ಲೆಡೆ ನಡೆಸಬೇಕೆಂಬ ಸಮಾವೇಶದ ಕರೆ. ಕೋಮು ವಾದಿಗಳಿಗೆ ದೇಶದ ಎಲ್ಲಾ ಜಾತ್ಯತೀತ ಶಕ್ತಿಗಳ ಮೊತ್ತಮೊದಲು ಒಗ್ಗಟ್ಟಿನಿಂದ ಒಪ್ಪಿದ ಪಂಥಾಹ್ವಾನ ಎನ್ನಬಹುದು.

ಸುಶಿಕ್ಷಿತರು. ಜಾತ್ಯತೀತತೆ ಎಂದರೇನೆಂಬುದು ಅವರಿಗೆ ತಿಳಿದಿದೆ. ಆದರೂ ಅವರಿಗೆ ಹೇಳೋಣ - ಜಾತ್ಯತೀತತೆಯೆಂದರೆ ಧರ್ಮವನ್ನು

Printed and Published ...

ಅಮೆರಿಕನ್ ವಿರೋಧಿ ಅರಬ್ ಕೋಪ

ಅಮೆರಿಕಾ ಮತ್ತು ಸೋವಿಯತ್ ಒಕ್ಕೂಟದ ಶೇಕಡಾ 50 ರಷ್ಟು ಪ್ರಮುಖ ದೂರಗಾಮಿ ಪರಮಾಣು ಶಸ್ತ್ರಾಸ್ತ್ರಗಳಲ್ಲಿ ಕಡಿತದ ಒಪ್ಪಂದ ಈ ವಾರದ ಪ್ರಮುಖ ಸುದ್ದಿ. ಮಾತ್ರವಲ್ಲ. 1985 ರಲ್ಲಿ ಗೋರ್ಬಚೇವ್ ನಾಯಕತ್ವದಲ್ಲಿ ಸೋವಿಯತ್ ಸರ್ಕಾರ ಆರಂಭಿಸಿರುವ "ಶಾಂತಿ ಆಕ್ರಮಣ"ದ ವಿಜಯದಲ್ಲಿ ದೊಡ್ಡ ಹಂತ. ಇಡೀ ವಿಶ್ವವನ್ನೇ ನಾಶ ಮಾಡಬಲ್ಲ ಪರಮಾಣು ಶಸ್ತ್ರಾಸ್ತ್ರಗಳ ನಾಶದತ್ತ ದೊಡ್ಡ ಹೆಜ್ಜೆ. ಇತ್ತ ಇಸ್ರೇಲಿಗೆ ಪ್ಯಾಲೆಸ್ಟೇನ್‌ನ ನಿಶ್ಶಸ್ತ್ರ ಸಾಮಾನ್ಯ ಜನರ ಮೇಲೆ ಬರ್ಬರ ಹಿಂಸಾಚಾರಕ್ಕೆ ಅಮೆರಿಕಾ ರಾಜಕೀಯ, ಮಿಲಿಟರಿ, ಬೆಂಬಲ ನೀಡುವುದನ್ನು ಅರಬ್ ದೇಶಗಳು ಅಪರೂಪದ ಐಕ್ಯತೆಯಿಂದ ಖಂಡಿಸಿವೆ. ಅತ್ತ ಪಾಕಿಸ್ತಾನದ ಸಿಂಧ್ ಪ್ರಾಂತದ ಕರಾಚಿ ಮತ್ತು ಹೈದರಾಬಾದ್‌ಗಳಲ್ಲಿ ನಡೆದಿರುವ ಕೋಮು ಗಲಭೆಯ ಹಿಂಸಾಚಾರ ದಂಗು ಬಡಿಸುವಂತಹುದು. ಬರ್ಮಾದಲ್ಲಿ ಚುನಾವಣೆಯ ಫಲವಾಗಿ ಪ್ರಜಾಸತ್ತೆ ಪುನಃ ಸ್ಥಾಪಿಸುವ ಸಾಧ್ಯತೆ ತೆರೆದಿದ್ದರೆ, ಕೊಲಂಬಿಯಾದಲ್ಲಿ ಆ ದೇಶದ ಮಾದಕ ವಸ್ತುಗಳ, ಮಾಫಿಯಾದ ವಿರುದ್ಧ ಹೋರಾಡುತ್ತಿರುವ ಅಭ್ಯರ್ಥಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಬಲ್ಗೇರಿಯಾ ಚೆಕೋಸ್ಲೊವೇಕಿಯಾ ಚುನಾವಣೆಗೆ ಸಿದ್ಧವಾಗುತ್ತಿದೆ.

ಪ್ಯಾಲೆಸ್ಟೇನ್‌ನಲ್ಲಿ ತೀರಾ ಹದಗೆಡುತ್ತಿರುವ ಪರಿಸ್ಥಿತಿ, ಇಸ್ರೇಲಿಗೆ ಅಮೆರಿಕಾದ ಬೆಂಬಲ ಯಾವುದೇ ಅಡೆತಡೆಯಿಲ್ಲದೆ ಮುಂದುವರಿಯುತ್ತಿರುವುದು ಅರಬ್ ದೇಶಗಳನ್ನು ತೀರಾ ರೇಗಿಸಿದೆ. ಇತ್ತೀಚೆಗೆ ಬಾಗ್ದಾದ್‌ನಲ್ಲಿ ಸೇರಿದ 16 ಅರಬ್ ದೇಶಗಳು 3-4 ದಿನಗಳ ತೀವ್ರ ಚರ್ಚೆಯ ನಂತರ ಒಮ್ಮತದ ನಿರ್ಣಯವನ್ನು ಅಂಗೀಕರಿಸಿದೆ. ಈ ನಿರ್ಣಯ ತೀರಾ ಖಾರವಾದ ಶಬ್ದಗಳಲ್ಲಿ ಅಮೆರಿಕದ ಪಶ್ಚಿಮ-ಏಷ್ಯಾ ನೀತಿಯನ್ನು ಖಂಡಿಸಿದೆ. ಇದು ಈ ಪ್ರದೇಶದಲ್ಲಿ ತಾರಕಕ್ಕೇರುತ್ತಿರುವ ಅಮೆರಿಕನ್ ವಿರೋಧಿ ಭಾವನೆಯ ಪ್ರತಿಬಿಂಬ. ಸಾಮಾನ್ಯವಾಗಿ ಅಮೆರಿಕನ್-ಪರ ಅರಬ್ ದೇಶಗಳಾದ ಇಜಿಪ್ಟ್, ಸೌದಿ ಅರೇಬಿಯಾಗಳು ಸಹ ಈ ಖಾರವಾದ ನಿರ್ಣಯ ಅನುಮೋದಿಸುವಷ್ಟು ಸ್ಥಿತಿ ಹದಗೆಟ್ಟಿದೆ.

ಅರಬ್ ದೇಶಗಳನ್ನು ರೇಗಿಸಿರುವುದು ಇತ್ತೀಚೆಗೆ ಪ್ಯಾಲೆಸ್ಟೇನ್‌ನಲ್ಲಿ ಇಸ್ರೇಲಿ ಅತ್ಯಾಚಾರದ ಬಗ್ಗೆ ಪ್ರತ್ಯಕ್ಷ ವರದಿ ಸಲ್ಲಿಸಲು ವಿಶ್ವಸಂಸ್ಥೆಯ ನಿಯೋಗ ಕಳಿಸುವ ಬಗ್ಗೆ ಆಡಿದ ಕಣ್ಣಾಮುಚ್ಚಾಲೆ ಆಟ ಮತ್ತು ಕೊನೆಯದಾಗಿ ವೀಟೋ ಉಪಯೋಗಿಸಿ ಇಂತಹ ನಿರ್ಣಯಕ್ಕೆ ಅಡ್ಡಗಾಲು ಹಾಕಿದ್ದು. ಇದಕ್ಕಿಂತ ಹಿಂದೆ ಎಲ್ಲಾ ಅರಬ್ ದೇಶಗಳಿಗೂ - ಅರಬ್ ಇಸ್ರೇಲಿ ಶಾಂತಿ ಮಾತುಕತೆಗಳಲ್ಲಿ ಪ್ಯಾಲೆಸ್ಟೇನನ್ನು ಸೇರಿಸದಿರುವುದು, ಸೋವಿಯೆತ್ ಜ್ಯೂ ವಲಸೆಗಾರರನ್ನು ಇಸ್ರೇಲ್ ಜೆರೊಸಲೆಂನಲ್ಲಿ ವಸತಿಗೊಳಿಸುವುದರ ಬಗ್ಗೆ ವಿರೋಧಿಸದಿರುವುದು ಮತ್ತು ಇರಾಕ್‌ನ ಅಮೆರಿಕನ್ ವಿರೋಧವನ್ನು ನಿಯಂತ್ರಿಸುವುದು ಸಲಹೆ ಮಾಡಿ - ಕಳಿಸಿದ್ದ ಪತ್ರ ಸಹ ಈ ಹಿಂದೆ ಹೆಚ್ಚಿನ ಅರಬ್ ದೇಶಗಳಿಗೆ ಕಿರಿಕಿರಿ ಉಂಟುಮಾಡಿತ್ತು.

ಇತ್ತೀಚೆಗೆ ಎಲ್ಲಾ ಅರಬ್ ದೇಶಗಳು ಯಾವುದೇ ವಿಷಯದಲ್ಲಿ ಐಕ್ಯ ನಿಲುವು ತೆಗೆದುಕೊಂಡ ವಿಶೇಷ ಸಂದರ್ಭ ಇದು. ಇಸ್ರೇಲಿನ ಬರ್ಬರ ಕೃತ್ಯಗಳು ಸಾಧ್ಯವಾಗಿರುವುದು ಅಮೆರಿಕ ಕೊಡುವ 'ಮಿಲಿಟರಿ ಆರ್ಥಿಕ ಸಹಾಯ, ಮತ್ತು ರಾಜಕೀಯ ಬೆಂಬಲದಿಂದ ಸಾಧ್ಯವಾಗಿರುವುದರಿಂದ, ಇದಕ್ಕೆ ಅದು ನೇರವಾಗಿ ಜವಾಬ್ದಾರ" ಎಂದು ನಿರ್ಣಯ ವರ್ಣಿಸಿದೆ.

ಬರಿಯ ಮಾತುಗಳಿಗೆ ಕೋಪ ಸೀಮಿತಗೊಳಿಸದೆ, ಬಾಗ್ದಾದ್ ಶಿಖರ ಸಮ್ಮೇಳನ ಸೋವಿಯೆತ್ ಜ್ಯೂ ವಲಸೆಗಾರರು ಇಸ್ರೇಲಿಗೆ ಬರಲು ಸಹಾಯ ಮಾಡುವ ದೇಶಗಳಿಗೆ ಬಹಿಷ್ಕಾರ ಮತ್ತು ಪ್ಯಾಲೆಸ್ಟೇನ್‌ನ 'ಇಂತಿಫದಾ' ಚಳುವಳಿಗೆ ತಿಂಗಳಿಗೆ 42 ಮಿಲಿಯ ಡಾಲರುಗಳ ಸಹಾಯ ಮತ್ತು ಜೋರ್ಡಾನ್‌ಗೆ ಮಿಲಿಯ 600 ಪೌಂಡ್ (ಒಂದು ಬಾರಿ ಮಾತ್ರ) ಕೊಡಲು ನಿರ್ಧರಿಸಿದೆ.

ಈ ಮಧ್ಯೆ ಅರಬ್ ದೇಶಗಳಲ್ಲಿ, ಒಂದಾದ ಯೆಮೆನ್‌ನ ಎರಡು ಭಾಗಗಳು ಒಂದಾಗಲು ನಿರ್ಧರಿಸಿವೆ. 30 ತಿಂಗಳ ಸಂಕ್ರಮಣದ ಕಾಲದ ನಂತರ ಉತ್ತರ ಮತ್ತು ದಕ್ಷಿಣ ಯೆಮೆನ್‌ಗಳು ಒಂದಾಗಲಿದ್ದು, ಈ ಕಾಲದಲ್ಲಿ ಸಂವಿಧಾನವನ್ನು ಬರೆಯಲಾಗುವುದು. ಯೆಮೆನ್‌ಗಳ ಐಕ್ಯತೆ ಅರಬ್‌ದೇಶಗಳ ಮೇಲೆ ದೊಡ್ಡ ಪರಿಣಾಮ ಬೀರಲಿದೆ. ಐಕ್ಯ ಯೆಮೆನ್ ಆರ್ಥಿಕವಾಗಿ ಮಿಲಿಟರಿ ಬಲದಲ್ಲಿ ಮತ್ತು ಜನಸಂಖ್ಯೆಯಲ್ಲಿ ಎರಡನೇ ದೊಡ್ಡ ದೇಶ. ಅತಿ ದೊಡ್ಡ ದೇಶವಾದ ಸೌದಿ ಅರೇಬಿಯಾದ ಹತ್ತಿರ ಬರುವ ದೇಶ. ಯೆಮೆನ್‌ನಲ್ಲಿ ಬೇರೂರಿರುವ ಪ್ರಜಾಸತ್ತಾತ್ಮಕ ವ್ಯವಸ್ಥೆ ಬೇರೆ ಅರಬ್ ದೇಶ ಗಳ ಜನರಿಗೂ ಹಬ್ಬುವ ಪ್ರಿಯವಾಗುವ ಸಾಧ್ಯತೆ ಇದೆ. ಇದು ಸೌದಿ ಅರೇಬಿಯಾ ಮತ್ತಿತರ ಅಮೆರಿಕನ್ ಪರ ರಾಜಸೊತ್ತಿಗೆ ಗಳಿಗೆ ಭಯಹುಟ್ಟಿಸುವ ವಿಷಯ.

ಗುಂಪು 15: ಉರುಗ್ವೆ ಮಾತುಕತೆಗಳಲ್ಲಿ ಬಿಗಿ ನಿಲುವು

ಅಮೆರಿಕ ಮತ್ತು ಇತರ ಸಾಮ್ರಾಜ್ಯಶಾಹಿ ದೇಶಗಳ ವಿರುದ್ಧ ಅರಬ್ ದೇಶಗಳು ಮಾತ್ರವಲ್ಲ, ಹಲವು ದೇಶಗಳ ಗುಂಪುಗಳು ಐಕ್ಯ ನಿಲುವು ತೆಗೆದುಕೊಳ್ಳಲು ಆರಂಭಿಸಿವೆ. ಅಲಿಪ್ತ ದೇಶಗಳಲ್ಲಿ 15 ದೇಶಗಳ ಗುಂಪಿನ ಸಮ್ಮೇಳನ ಹಲವು ಪ್ರಮುಖ ನಿರ್ಧಾರಗಳನ್ನು ತೆಗೆದು ಕೊಂಡಿದೆ.

ಇವುಗಳಲ್ಲಿ ಮುಖ್ಯವಾದದ್ದು ಎಲ್ಲಾ ಅಭಿವೃದ್ಧಿ ಹೊಂದಿರುವ ಮತ್ತು ಹೊಂದುತ್ತಿರುವ ದೇಶಗಳ ಬಹುಮುಖ್ಯ ವಾಣಿಜ್ಯ ಒಪ್ಪಂದಗಳ ಬಗ್ಗೆ ಮುಂಬರುವ ಉರುಗ್ವೆ ಮಾತುಕತೆಗಳಲ್ಲಿ ಐಕ್ಯಬಿಗಿ ನಿಲುವು ತೆಗೆದುಕೊಳ್ಳಲು ನಿರ್ಧರಿಸಿವೆ. ಈ ಮಾತುಕತೆಗಳಲ್ಲಿ, ಬೆಳೆಯುತ್ತಿರುವ ಮೂರನೇ ಜಗತ್ತಿನ ದೇಶಗಳ ಮುಖ್ಯ ರಫ್ತಾದ ಬಟ್ಟೆಯ ವ್ಯಾಪಾರದ ಮೇಲೆ ನಿರ್ಬಂಧ ಹೇರಿ, ಈ ದೇಶಗಳ ಸೇವಾ ಕ್ಷೇತ್ರದಲ್ಲಿ ಇರುವ ನಿರ್ಬಂಧಗಳನ್ನು ಕಿತ್ತು ಹಾಕಬೇಕೆಂಬ ಇಬ್ಬಗೆಯ ಅಮೆರಿಕನ್ ನೀತಿಯನ್ನು ಒಗ್ಗಟ್ಟಾಗಿ ವಿರೋಧಿಸಲು ನಿರ್ಧರಿಸಲಾಗಿದೆ.

ಇದಲ್ಲದೆ ಗುಂಪು- 15 ಕ್ಕೆ ಒಂದು ಶಾಶ್ವತ ಸೆಕ್ರೆಟಾರಿಯಟ್, ವಿಶೇಷ ತಜ್ಞರು ಇರುವ ಮುಖ್ಯ ಕಚೇರಿ, ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನಡುವಣ ಸುಮಾರು 10 ಸಹಕಾರ ಪ್ರಾಜೆಕ್ಟ್‌ಗಳು ಮತ್ತು ದಕ್ಷಿಣ-ಉತ್ತರ ಮಾತುಕತೆಗಳಿಗೆ ಕರೆ ಈ ಸಮ್ಮೇಳನ ತೆಗೆದುಕೊಂಡ ಪ್ರಮುಖ ನಿರ್ಣಯಗಳು.

ಇಂತಹ ಸಾಮ್ರಾಜ್ಯಶಾಹಿ-ವಿರೋಧದ ಹೊಸ ಅಲೆಯ ನಡುವೆಯೂ, ಗ್ರೀಸ್‌ನಲ್ಲಿ ಅಮೆರಿಕಾದ ಸೇನಾ ನೆಲೆಯನ್ನು 5 ವರ್ಷಗಳಷ್ಟು ಮುಂದುವರಿಸುವ ನಿರ್ಧಾರಕ್ಕೆ ಸಹಿ ಹಾಕಿದೆ. ಡಿಸೆಂಬರ್ 1988 ರಲ್ಲೇ ಈ ಒಪ್ಪಂದ ಮುಗಿದಿದ್ದು, ದೀರ್ಘ ಚೌಕಾಸಿ ಮಾತುಕತೆಗಳ ನಂತರ ಒಪ್ಪಂದವೇರ್ಪಟ್ಟಿದೆ. ಹಿಂದೆ ಗ್ರೀಸ್‌ನಲ್ಲಿ ಅಮೆರಿಕನ್ ನೆಲೆಯನ್ನು ಮುಚ್ಚಲು ಬಲವಾದ ಸಾರ್ವಜನಿಕ ಅಭಿಪ್ರಾಯ ಮೂಡಿತ್ತು. ಹಿಂದಿನ ಚುನಾವಣೆಯಲ್ಲಿ ಇದು ಪ್ರಮುಖ ಚರ್ಚಾಸ್ಪದ ವಿಷಯವೂ ಆಗಿತ್ತು.

ಮುಗಿದಿರುವ, ಮುಂಬರುವ ಚುನಾವಣೆಗಳು

ಅಂತರಾಷ್ಟ್ರೀಯ ಮಹತ್ವ ಹೊಂದಿರುವ ಹಲವು ದೇಶಗಳ ಚುನಾವಣೆ ಫಲಿತಾಂಶ ಬಂದಿದೆ. ಇನ್ನೂ ಹಲವು ದೇಶ ಗಳು ಚುನಾವಣೆಗೆ ಸಿದ್ಧತೆ ನಡೆಸಿವೆ.

ಬರ್ಮಾದಲ್ಲಿ 30 ವರ್ಷಗಳ ನಂತರ ನಡೆದ ಪ್ರಥಮ ಚುನಾವಣೆಗಳಲ್ಲಿ ವಿರೋಧ ಪಕ್ಷವಾಗಿದ್ದ ನೇಶನಲ್ ಲೀಗ್ ಆಫ್ ಡೆಮಾಕ್ರಸಿ' ಭಾರಿ ಬಹುಮತ ಗಳಿಸಿದೆ. ಸುಮಾರು 485 ಸ್ಥಾನಗಳಲ್ಲಿ 371 ಸ್ಥಾನಗಳನ್ನು ಈ ಪಕ್ಷ ಗಳಿಸಿದೆ.

ಆಳುವ ಪಕ್ಷ ಭಾರೀ ಸೋಲು ಅನುಭವಿಸಿದೆ. ಚುನಾವಣೆ ಪೂರ್ವದಲ್ಲಿ ವಿರೋಧ ಪಕ್ಷದ ಹಲವಾರು ನಾಯಕರನ್ನು ಬಂಧನದಲ್ಲಿಡಲಾಗಿತ್ತು. ಮುಕ್ತ ಚುನಾವಣಾ ಪ್ರಚಾರವೂ ಕಷ್ಟವಾಗಿತ್ತು. ಆದರೂ ಆಳುವ ಪಕ್ಷ ಸೋತಿದೆ. ಜನರ ತೀರ್ಪಿಗೆ ತಲೆಬಾಗಿ ಅಧಿಕಾರ ವಹಿಸಿಕೊಡುತ್ತದೆ ಎಂದು ಆಶಿಸಬೇಕಾಗಿದೆ. ಕೊಲಂಬಿಯಾದಲ್ಲಿ ನಡೆದ ಚುನಾವಣೆ, ಮಾದಕದ್ರವ್ಯಗಳ ಲಾಭಖೋರ ಮಾಫಿಯಾ ಜತೆ ಘರ್ಷಣೆಯಾಗಿತ್ತು. ಈ ಮಾಫಿಯಾದ ಮೇಲೆ ಬಿಗಿ ಕ್ರಮ, ಮತ್ತು ಅದರ ಭಯೋತ್ಪಾದಕ ಚಟುವಟಿಕೆಗಳ ನಿಲುಗಡೆಯನ್ನು ಬಲವಾಗಿ ಪ್ರತಿಪಾದಿಸುತ್ತಿದ್ದ ಸೀಸರ್ ಗವಿರಿಯಾ ಗೆದ್ದಿದ್ದಾರೆ. ಈ ನಿಲುವನ್ನು ಮುಂದುವರಿಸುವುದಾಗಿ ಅವರು ವಾಗ್ದಾನ ನೀಡಿದ್ದಾರೆ. ಈ ಮಾಫಿಯಾಕ್ಕೆ ಅಮೆರಿಕಾದಲ್ಲಿ ಭಾರಿ ಬೆಂಬಲದ ಜಾಲವಿದೆ.

ಪೂರ್ವ ಯುರೋಪಿನ ಎರಡು ದೇಶ ಗಳಲ್ಲಿ-ಚೆಕೋಸ್ಲಾವಾಕಿಯಾ ಜೂನ್ 8,9 ಕ್ಕೆ, ಬಲ್ಗೇರಿಯಾ ಜೂನ್ 10 ಕ್ಕೆ ಚುನಾವಣಾ ಸಿದ್ಧತೆ ನಡೆಯುತ್ತಿದೆ. ಪಾರ್ಲಿಮೆಂಟರಿ ಸ್ಥಾನಗಳಿಗೆ ಕಮ್ಯುನಿಸ್ಟ್ ಪಕ್ಷ ಸೇರಿದಂತೆ (ಬಲ್ಗೇರಿಯಾನ್ ಸೋಶಲಿಸ್ಟ್ ಪಕ್ಷ ಎಂದು ಅದು ಹೆಸರು ಬದಲಾಯಿಸಿದೆ) 30 ಪಕ್ಷಗಳು ಕಣದಲ್ಲಿವೆ -ಬಲ್ಗೇರಿಯಾದಲ್ಲಿ. ಚೆಕೋಸ್ಲಾವಿಯಾದಲ್ಲಿ ಪಕ್ಷಗಳು ಸ್ಪರ್ಧಿಸಿವೆ.

ಲೋಕಸಂಚಾರ

ಪಾಕಿಸ್ತಾನದ ಸಿಂಧ್‌ನಲ್ಲಿ ಅರಾಜಕತೆ

1947 ರಲ್ಲಿ ಭಾರತ ವಿಭಜನೆಯಾದಾಗ ನಾವು ಮುಂಬಯಿ ಬಿಟ್ಟು ಇಲ್ಲಿಗೆ ಓಡಿ ಬಂದೆವು. ಈಗ ಎಲ್ಲಿ ಹೋಗುವುದು? ಅರಬ್ಬಿ ಸಮುದ್ರಕ್ಕೆ ಬೀಳುವುದೇನು? ಇನ್ನೆಲ್ಲಿಗಾದರೂ ಹೋಗುವುದಾದರೆ ಪಾಕಿಸ್ತಾನ್ ಬಿಟ್ಟೇ ಹೋಗಬೇಕು" ಕರಾಚಿಯ 45 ಕೋಟಿ ಬೆಲೆಬಾಳುವ ಬಟ್ಟೆ ಗಿರಣಿಯ ಮಾಲಿಕ ಫರೂಕ್ ಸುಮಾರ್‌ರ ಮಾತುಗಳು ಕಳೆದ ಹಲವು ತಿಂಗಳುಗಳಿಂದ ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ನಡೆಯುತ್ತಿರುವ ಜನಾಂಗೀಯ ಗಲಭೆಯ ಭೀಕರ ಪರಿಣಾಮವಿದು. ಕಳೆದ ವರ್ಷ ಗಲಭೆಗಳಲ್ಲಿ ಸಾವಿರದಷ್ಟು ಜನ ಸತ್ತರೆ, ಈ ವರ್ಷದ ಮೊದಲ 4 ತಿಂಗಳಲ್ಲಿ 400-500 ಜನ ಸತ್ತಿದ್ದಾರೆ. ಕಳೆದ ಒಂದು ವರ್ಷದಲ್ಲಿ 85 ಲಕ್ಷಾಧೀಶ, ಕೋಟ್ಯಾಧೀಶ ವ್ಯಾಪಾರಿ ಉದ್ಯಮಿಗಳು ಅಥವಾ ಅವರ ಆಪ್ತರನ್ನು ಒತ್ತೆಯಾಳುಗಳಾಗಿ ಅಪಹರಿಸಿ ಒತ್ತೆ ಹಣ ಸಂಗ್ರಹಿಸಿದ ಘಟನೆಗಳು ನಡೆದಿವೆ. ಒಬ್ಬ ಶ್ರೀಮಂತ ಯುವಕ ಒತ್ತೆಯಾಳಾಗಿ 53 ವಾರ ಕಳೆಯಬೇಕಾಯಿತು 10 ಲಕ್ಷ ಒತ್ತೆ ಹಣಕ್ಕಾಗಿ ಅಪಹರಿಸಿದ ಗುಂಪು ಇನ್ನೊಂದು ಗುಂಪಿಗೆ 25 ಲಕ್ಷಕ್ಕೆ ಮಾರಿತು. ಈ ಮೂರು ನಾಲ್ಕು ಗ್ಯಾಂಗುಗಳು ಆತನನ್ನು 'ಮಾರಿ' ಕೊನೆಯ ಗ್ಯಾಂಗು ಒಂದೂವರೆ ಕೋಟಿ ಒತ್ತೆ ಹಣ ವಸೂಲಿ ಮಾಡಿತಂತೆ.

ಕಾನೂನು ಮತ್ತು ವ್ಯವಸ್ಥೆ ಎಷ್ಟು ಹದಗೆಟ್ಟಿದೆಯೆಂದರೆ ಕರಾಚಿಯ ಮೂರನೇ ಎರಡು ಭಾಗ ಕರ್ಫ್ಯೂದಲ್ಲಿದೆ. ಅನಧಿಕೃತ 'ಕಲಶ್‌ನಿಕೋವ್' ಗನ್‌ಗಳ ಸಂಖ್ಯೆ ಕರಾಚಿಯಲ್ಲಿ 50 ಸಾವಿರಕ್ಕೆ ಮುಟ್ಟಿದೆ. ಸಾಮಾನ್ಯ ಶಸ್ತ್ರಾಸ್ತ್ರಗಳಲ್ಲದೆ ರಾಕೆಟ್‌ಗಳನ್ನು ಗಲಭೆಗಳಲ್ಲಿ ಸಲೀಸಾಗಿ ಉಪಯೋಗಿಸಲಾಗುತ್ತಿದೆ. ನಗರದ ಪೋಲೀಸರ ಮೇಲೆ ಯಾರಿಗೂ ವಿಶ್ವಾಸ ಉಳಿದಿಲ್ಲ. ಎಷ್ಟೋ ಶ್ರೀಮಂತರು, ದೊಡ್ಡ ಕಂಪನಿಗಳು ಖಾಸಗಿ ಸರಕು ರಕ್ಷಣಾ ಸಿಬ್ಬಂದಿ ಇರಿಸಿಕೊಳ್ಳಬೇಕಾದಷ್ಟು ಮಟ್ಟಕ್ಕೆ ಬಂದಿವೆ. ಹೆಚ್ಚು ಕಡಿಮೆ ಇಂತಹುದೇ ಸ್ಥಿತಿ ಸಿಂಧ್‌ನ ಇನ್ನೊಂದು ಪಟ್ಟಣ ಹೈದರಾಬಾದ್‌ನಲ್ಲಿದೆ.

ಮಿಲಿಟರಿ ಆಳ್ವಿಕೆ ಕೊನೆಯಾದ ಮೇಲೆ ಅಧಿಕಾರಕ್ಕೆ ಬೆನ್‌ಜೀರ್ ಭುಟ್ಟೋರ PPP ಪಕ್ಷ ಅಧಿಕಾರದಲ್ಲಿರುವ ಏಕ ಮಾತ್ರ ರಾಜ್ಯ ಮತ್ತು ಆಕೆಯ ಸ್ವರಾಜ್ಯ ಸಿಂಧ್. ಆದ್ದರಿಂದ ಇದಕ್ಕೆ ಭಾರಿ ರಾಜಕೀಯ ಮಹತ್ವವಿದೆ. ಪರಿಸ್ಥಿತಿ ಸೈನ್ಯ ಉಪಯೋಗಿಸಬೇಕಾದ ಗಂಭೀರವಾಗಿರುವುದರಿಂದ ಇದು ಸೈನ್ಯಕ್ಕೆ ಸಿವಿಲ್ ಆಡಳಿತದಲ್ಲಿ ಪುನಃ ಸ್ಥಾನ ಕೊಡುವ ಅಪಾಯಕಾರಿ ಆಗತ್ಯ ಉಂಟಾಗಿದೆ. ಇದು ಭುಟ್ಟೋರವರ ಸರಕಾರವನ್ನೇ ಬುಡಮೇಲು ಮಾಡಬಹುದು.

ಕರಾಚಿಯ ಪಾಕಿಸ್ತಾನದ 'ಬೊಂಬಾಯಿ' ಒಂದು ರೀತಿಯಲ್ಲಿ ಪಾಕಿಸ್ತಾನದ ಅತಿ ದೊಡ್ಡ ಬಂದರು ಮತ್ತು ವಾಣಿಜ್ಯ ಕೇಂದ್ರ. ಹಲವು ಜನಾಂಗಗಳು ವಾಸಿಸುವ ನಗರ. ಬಹುಸಂಖ್ಯಾತರು ಪ್ರಾಂತ್ಯದಲ್ಲಿ ಸಿಂಧಿಗಳು. ಉಳಿದವರಲ್ಲಿ ಭಾರತದಿಂದ ನಿರಾಶ್ರಿತರಾಗಿ ಬಂದ ಮೊಹಜಿರ್‌ಗಳು, ಪಠಾಣರು, ಪಂಜಾಬಿಗಳು, ಬಲೂಚಿಗಳು, ಇತ್ಯಾದಿ. ಮೊಹಜಿರ್ ಮತ್ತು ಪಠಾಣರು, ಮೊಹಜಿರ್ ಮತ್ತು ಸಿಂಧಿಗಳ ನಡುವೆ ಘರ್ಷಣೆ ಹಿಂದಿನಿಂದಲೂ ಇತ್ತು. ಆದರೆ ಅಫ್‌ಘಾನ್ ಯುದ್ಧಕ್ಕೆ ಹರಿದು ಬರುತ್ತಿರುವ ಅಮೆರಿಕನ್ ಶಸ್ತ್ರಾಸ್ತ್ರಗಳು, ಹೂಡ ಹೋಳಿ ಮತ್ತು ಕರಾಚಿ ಮಾದಕ ದ್ರವ್ಯಗಳ ಪ್ರಮುಖ ಕೇಂದ್ರವಾಗಿರುವುದು, ಈ ಸ್ಫೋಟಕ ಪರಿಸ್ಥಿತಿಗೆ ಕಾರಣವಾಗಿದೆ. ಮಾದಕ ದ್ರವ್ಯಗಳ ಮಾಫಿಯಾಕ್ಕೆ ಜನಾಂಗೀಯ ಗಲಭೆಗಳನ್ನು ಹರಡುವುದರಲ್ಲಿ, ಅರಾಜಕತೆ ಉಂಟುಮಾಡುವುದರಲ್ಲಿ ಸ್ವಂತ ಸ್ವಾರ್ಥವಿದೆ. ತಮ್ಮ ರಾಜಕೀಯ ಅಥವಾ ಇತರ ವೈರಿಗಳ ವಿರುದ್ಧ ಈ ಮಾಫಿಯಾ ಗ್ಯಾಂಗುಗಳನ್ನು ಬಳಸುವುದು ಸರ್ವೇಸಾಮಾನ್ಯವಾಗಿದೆ. ಭುಟ್ಟೋರವರ ಸರ್ಕಾರಕ್ಕೆ ಸಮಸ್ಯೆ ಉಂಟು ಮಾಡಲು, ಅದರ ನೈತಿಕ ಸ್ಥೈರ್ಯ ಜನಬೆಂಬಲವನ್ನು ನಾಶಮಾಡಲು ಮಿಲಿಟರಿ. ಬೇಹುಗಾರಿಕೆ ಏಜೆನ್ಸಿಗಳ ಒಂದು ವಿಭಾಗ ಈ ಅರಾಜಕತೆಗೆ ಕುಮ್ಮಕ್ಕು ಕೊಡುತ್ತಿರುವ ಸಾಧ್ಯತೆಯನ್ನು ತಳ್ಳಿಹಾಕುವುದು ಕಷ್ಟ.

ಇದಕ್ಕೆ ಭುಟ್ಟೋರವರ PPP ನ ತಪ್ಪು ರಾಜಕೀಯ ಸಹ ಕಾರಣ. ಮಿಲಿಟರಿ ಆಡಳಿತದ ವಿರುದ್ಧ ರೂಪುಗೊಳ್ಳುತ್ತಿದ್ದ MRD (ಪ್ರಜಾಸತ್ತೆ ಪುನಃಸ್ಥಾಪನ ಚಳುವಳಿ) ಯ ಜತೆ ಕೊನೆಘಳಿಗೆಯಲ್ಲಿ, ಸಂದರ್ಭ ಸಾಧಕತನದಿಂದ ಮೈತ್ರಿ ಮುರಿದದ್ದು ದೇಶದ ಪ್ರಜಾಸತ್ತೆಗೆ ಮಾರಕವಾಗಿದೆ. ಆಮೇಲೆ ಸರಕಾರ ನಡೆದು ಕೊಂಡಿರುವ ರೀತಿಯೂ ಜನಪ್ರಿಯವಲ್ಲ. ಮೊಹಜೀರ್ ಪಕ್ಷ MQM, PPP ಯ ಮೈತ್ರಿ ಕೂಟದಲ್ಲಿತ್ತು. ಈಗ ಅವು ಭಾರೀ ಸತ್ಯಾಗ್ರಹಿ ವೈರಿಗಳು. ಸರ್ಕಾರ ಸಿಂಧಿಗಳ ಪರ-ಮೊಹಜೀರ್‌ಗಳನ್ನು ಬಗ್ಗುಬಡಿಯಲು ಪ್ರಯತ್ನಿಸುತ್ತಿದೆ. ಎಂದು ತೀವ್ರ ಆಪಾದನೆ ಮಾಡಲಾಗಿದೆ.

ಸಿಂಧ್‌ನ ಈ ಗಂಭೀರ ಸ್ಥಿತಿಯನ್ನು ಕಂಡು 'ಹಿಗ್ಗುವ' ಧೋರಣೆ ಸ್ವಲ್ಪ ಮಟ್ಟಿಗೆ ಕೆಲವು ಪತ್ರಿಕೆಗಳಲ್ಲಿ ಅಧಿಕೃತ ಮಾಧ್ಯಮಗಳಲ್ಲಿ ಕಂಡು ಬಂದಿದೆ. ಜನಾಂಗ ಗಲಭೆಗಳು ಎಲ್ಲೇ ಆದರೂ ಆತಂಕಕಾರಿ. ಅದು ಎಲ್ಲವನ್ನೂ ಕೊನೆಯಲ್ಲಿ ನಾಶ ಮಾಡಿ ಬಿಡುತ್ತದೆ. ಧರ್ಮ ಆಧಾರಿತ ರಾಜಕಾರಣ, ದೇಶ ಎಲ್ಲಾ ಅಲ್ಪಸಂಖ್ಯಾತ ಸಮಸ್ಯೆಯನ್ನು ಬಗೆಹರಿಸಿ ಬಿಡುತ್ತದೆ ಎಂಬ ಭ್ರಮೆ ಇರುವವರಿಗೆ ಇದು ಕಣ್ತೆರೆಸಬೇಕು.

ಇದು ನಿಮಗೆ ಗೊತ್ತೆ ?

ಒಂದು ಸೋವಿಯತ್ ಕುಟುಂಬ ಸರಾಸರಿ ಪತ್ರಿಕೆ ಹಾಗೂ ಮ್ಯಾಗಝೀನ್‌ಗಳನ್ನು ಕೊಂಡುಕೊಳ್ಳುತ್ತೇವೆ. ಸೋವಿಯತ್ ಒಕ್ಕೂಟದಲ್ಲಿ ಸಾಮೂಹಿಕ ಮಾಧ್ಯಮ ಜನತೆಯ ಸೊತ್ತು. ಜನತಾ ಪ್ರತಿನಿಧಿಗಳ ಸೋವಿಯತ್‌ಗಳು, ಕಮ್ಯುನಿಸ್ಟ್ ಪಕ್ಷ, ಕಾರ್ಮಿಕ ಸಂಘಗಳು, ಯುವಜನರ, ಮಹಿಳೆಯರ, ಮಕ್ಕಳ, ಸಹಕಾರಿಗಳ, ಧಾರ್ಮಿಕ ಹಾಗೂ ಇತರ ಸಂಘಟನೆಗಳು, [illegible] ಕಾರ್ಯಕರ್ತರ ಸಂಘ, ವೈಜ್ಞಾನಿಕ ಮತ್ತು ತಾಂತ್ರಿಕ ಸಂಘಟನೆ ಗಳು, [illegible] [illegible] ಎಲ್ಲಾ ಸಾರ್ವಜನಿಕ [illegible] ಸಂಘಟನೆಗಳು ತಮ್ಮದೇ [illegible] ಪತ್ರಿಕೆಗಳನ್ನು, [illegible] [illegible] ಮ್ಯಾಗಝೀನ್‌ಗಳನ್ನು ಹೊಂದಿವೆ.

[illegible]

ಜುಲೈ ತಿಂಗಳಲ್ಲಿ ವಿವಾದಗ್ರಸ್ತ ಪ್ರದೇಶದಲ್ಲಿ ದೇವಸ್ಥಾನ ಕಟ್ಟಲು ಪ್ರಯತ್ನಿಸುವವರಿಗೆ ದ್ವಾರಕೆಯ ಶಂಕರಾಚಾರ್ಯರಿಗೆ ತಂದ ಮರ್ಯಾದೆಯೇ ಸಿಗಲಿದೆ.

-ಮುಲಾಯಮ್ ಸಿಂಗ್ ಯಾದವ್

ರಾಜ್ಯ (ಅಧಿಕಾರ) ಕಿತ್ತುಕೊಳ್ಳಲು ರಾಮನ ಹೆಸರಿನ ಬಳಕೆಯೇ ಬಿ.ಜೆ.ಪಿ.ಯ ರಾಮರಾಜ್ಯ

-ಹರ್ಕಿಶನ್ ಸಿಂಗ್ ಸುರ್ಜಿತ್

ರಾಮಜನ್ಮಭೂಮಿಯ ಬೇಡಿಕೆಯೆತ್ತುವವರೇ ಕೇಳಿ, ನಿಮ್ಮ ದೇವಸ್ಥಾನ ಸಂಯುಕ್ತ ಭಾರತದಲ್ಲಿ ಸಾಧ್ಯವಿಲ್ಲ. ವಿಭಜಿತ ಆರ್ಯಾವರ್ತದಲ್ಲಷ್ಟೇ ಸಾಧ್ಯ

-ಚಂದ್ರಶೇಖರ್

1947 ರಲ್ಲಿ ಭಾರತದ ವಿಭಜನೆ ನಮ್ಮ ದೇಶದ್ದಷ್ಟೇ ಅಲ್ಲ. ಇದೀ ವಿಶ್ವದ ಒಂದು ದುರಂತ. ರಾಜಕೀಯದೊಂದಿಗೆ ಧರ್ಮವನ್ನು ಬೆರೆಸಿದರೆ ಸಿಗುವ ಫಲ ಇದೇ. ಅಡ್ವಾಣಿಯವರಿಗೆ ಇದೂ ಗೊತ್ತಿದೆ.

-ಇ.ಎಂ.ಎಸ್.

ಕೋಮುವಾದವನ್ನು ಎದುರಿಸುವಲ್ಲಿ ಎಡಪಕ್ಷಗಳ ದೃಢ ನಿಲುವು ಪ್ರಗತಿಪರ ಶಕ್ತಿಗಳಲ್ಲಿ ಉತ್ಸಾಹ ತುಂಬಿದೆ.

-ರಾಮಧನ್

ಕಮ್ಯುನಿಸ್ಟರು ಧರ್ಮ - ವಿರೋಧಿಗಳಲ್ಲ. ಧರ್ಮ ಮತ್ತು ರಾಜಕೀಯವನ್ನು ಬೆರೆಸುವುದನ್ನು ವಿರೋಧಿಸುವವರು.

-ಇಂದ್ರಜಿತ್ ಗುಪ್ತ.

ಜನತೆಯ ಹಿತಾಸಕ್ತಿಗಳೆಲ್ಲಾ ಒಂದೇ. ಅಲ್ಪಸಂಖ್ಯಾತರ ಪ್ರಾಮಾಣಿಕತೆಯ ಬಗ್ಗೆ ಶಂಕಿಸುವುದನ್ನು ಬಿಟ್ಟುಬಿಡಿ.

-ಸುರೇಂದ್ರಮೋಹನ್

ಧರ್ಮದ ಆಧಾರದ ಮೇಲೆ ಜನರಲ್ಲಿ ಒಡಕು ತರುವವರು ದೇಶದ ಶತ್ರುಗಳು

-ಚಿತ್ತ ಬಸು

ಎಲ್ಲಾ ರಾಜ್ಯಗಳ ರಾಜಧಾನಿಗಳಲ್ಲಿ, ಪ್ರಮುಖ ಕೇಂದ್ರಗಳಲ್ಲಿ ಕೋಮುವಾದದ ವಿರುದ್ಧ ಪ್ರಚಾರ ನಡೆಸಬೇಕು. ಹಳ್ಳಿಗಳವರೆಗೂ ಇದನ್ನು ಒಯ್ಯಬೇಕು.

-ತ್ರಿದೇಬ್ ಚೌಧರಿ

ಧರ್ಮವನ್ನು ರಾಜಕೀಯಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ

-ದಿನೇಶ್ ಸಿಂಗ್

ದೇಶಪ್ರೇಮ ಯಾವುದೇ ಒಂದು ಧರ್ಮದ ಆಸ್ತಿಯಲ್ಲ

-ಮಾರ್ಗರೇಟ್ ಆಳ್ವ

ದೆಹಲಿ ಸಮಾವೇಶ

ಪುಟ 6ರಿಂದ

ರಾಜಕೀಯದಿಂದ ಪ್ರತ್ಯೇಕಿಸುವುದು. ಇದು ನಮ್ಮ ಸ್ವಾತಂತ್ರ್ಯ ಹೋರಾಟದ ಸತ್ವ. ಸಂವಿಧಾನಕ್ಕೆ ಆಧಾರವಾದ ಸತ್ವ ಕೂಡಾ ಇದೇ ಎಂದರು

ನಿರ್ಣಯವನ್ನು ಅನುಮೋದಿಸಿ ಮಾತನಾಡಿದ ಇ.ಎಂ.ಎಸ್ ದೇಶದ ವಿಭಜನೆ ನಮ್ಮ ದೇಶಕ್ಕಷ್ಟೇ ಅಲ್ಲ, ಇಡೀ ವಿಶ್ವದ ಒಂದು ದುರಂತ. ರಾಜಕೀಯದೊಂದಿಗೆ ಧರ್ಮವನ್ನು ಬೆರೆಸಿ ದರೆ ಸಿಗುವ ಫಲ ಇದೇ. ಅಡ್ವಾಣಿಯವರಿಗೆ ಇದೂ ಗೊತ್ತಿದೆ ಎಂದು ವ್ಯಂಗ್ಯವಾಗಿ ಹೇಳಿದ ಇ.ಎಂ.ಎಸ್. ಬಿ.ಜೆ.ಪಿ. ಹೇಳುವ ರಾಷ್ಟ್ರದ ಹಿಂದೂ ಪುನರುತ್ಥಾನ ವಷ್ಟೇ ಮತ್ತೇನಲ್ಲ ಎಂದರು.

ಕಮ್ಯುನಿಸ್ಟರನ್ನು ಧರ್ಮದಲ್ಲಿ ನಂಬಿಕೆಯಿಲ್ಲದ ಜನ ಎಂದು ಹೀಗಳೆಯಲಾಗುತ್ತದೆ. ಆದರೆ ಈಗ ಒಂದು ಪೂಜಾಸ್ಥಳವನ್ನು ಕೆಡವಬೇಕೆನ್ನುತ್ತಿರುವವರು ಧಾರ್ಮಿಕರೆನಿಸಿ ಕೊಳ್ಳುವವರೇ ಎಂದ ಸಿ.ಪಿ.ಐ. ಪ್ರಧಾನ ಕಾರ್ಯದರ್ಶಿ ಇಂದ್ರಜಿತ್‌ಗುಪ್ತ ಕಮ್ಯುನಿಸ್ಟರು ಧರ್ಮ-ವಿರೋಧಿಗಳಲ್ಲ, ಆದರೆ ಧರ್ಮ ಮತ್ತು ರಾಜಕೀಯವನ್ನು ಬೆರೆಸುವುದನ್ನು ವಿರೋಧಿಸುವವರು ಎನ್ನುತ್ತಾ ಬಿ.ಜೆ.ಪಿ. ರಾಮಜನ್ಮಭೂಮಿ ಬಾಬ್ರಿಮಸೀದಿ ವಿವಾದದಲ್ಲಿ ನ್ಯಾಯಾಲಯದ ತೀರ್ಪನ್ನೇಕೆ ಒಪ್ಪಲು ಸಾಧ್ಯವಿಲ್ಲ ಎಂದು ಪ್ರಶ್ನಿಸಿದರು. ಹಿಂದೂ ಮೂಲಭೂತವಾದಿಗಳು ಹಿಡಿದಿರುವ ಹಾದಿ ವಿನಾಶದ ಹಾದಿ ಎಂದು ಎಚ್ಚರಿಸಿದವರು ಸಿ.ಪಿ.ಐ. ಸಂಸದೀಯ ಸದಸ್ಯ ಎಂ.ಫಾರೂಕಿ.

ಜಾತ್ಯತೀತತೆಯೆಂದರೇನು ಎಂದು ತಿಳಿಯಲು ಅರ್ಥಕೋಶ ಹುಡುಕಾಡ ಬೇಕಿಲ್ಲ. ತನ್ನೊಳಗೆ ನೋಡಿಕೊಂಡರಷ್ಟೆ ಸಾಕು - ಕೋಮುವಾದ ಏನೆಂದು ಅರ್ಥ ಮಾಡಿಕೊಳ್ಳಬಹುದು ಎಂದರು ನ್ಯಾಯಮೂರ್ತಿ ಅಯ್ಯರ್. ಕೋಮುವಾದದ ವಿಷ ದೇಶವನ್ನೆಲ್ಲಾ ವ್ಯಾಪಿಸದೆ. ಕೋಮು ದೇಶವನ್ನು ವಿಷಮುಕ್ತಗೊಳಿಸಿ ಎಂದು ಅವರು ಮನವಿ ಮಾಡಿಕೊಂಡರು.

ವೇದಿಕೆಯ ಮೇಲಿದ್ದ ಇತರ ಗಣ್ಯರೂ ಕೋಮುವಾದ ಹಾಗೂ ಪ್ರತ್ಯೇಕತಾವಾದದ ವಿರುದ್ಧ ಹೋರಾಟದ ವಿವಿಧ ಆಯಾಮಗಳ ಬಗ್ಗೆ ಮಾತನಾಡಿದರು (ಬಾಕ್ಸ್ ನೋಡಿ). ಸಮಾವೇಶ ಸರ್ವಾನುಮತದಿಂದ ಅಂಗೀಕರಿಸಿದ ನಿರ್ಣಯ "ಕೋಮುವಾದಿ ಶಕ್ತಿಗಳನ್ನು ಖಂಡಿಸಿ! ಬಾಬ್ರಿ ಮಸೀದಿ ರಾಮಜನ್ಮಭೂಮಿ ವಿಷಯದಲ್ಲಿ ತರ್ಕಬದ್ಧನ್ಯಾಯ ನಿಲುವಿನ ಸುತ್ತ ಅಣಿನೆರೆದು ಕೋಮು ಹಿಂಸಾಚಾರವನ್ನು ತಡೆದು ಅದರಿಂದಾಗುವ ಹೇಳತೀರದ ಸಂಕಷ್ಟಗಳಿಂದ ಅಸಂಖ್ಯ ಮುಗ್ಧ ಕುಟುಂಬಗಳನ್ನು ಕಾಪಾಡಿ" ಎಂದು ಕರೆ ನೀಡಿದೆ. ಕೋಮು ಸೌಹಾರ್ದ, ರಾಷ್ಟ್ರೀಯ ಐಕ್ಯತೆ ಕಾಪಾಡುವ ತುರ್ತು ಕೆಲಸಕ್ಕೆ ಸದ್ಭಾವನೆಯ ಎಲ್ಲಾ ಪುರುಷರನ್ನು, ಮಹಿಳೆಯರನ್ನು ಅಣಿನೆರೆಸಲು ಸಮಾವೇಶಗಳು, ರ್‍ಯಾಲಿಗಳು, ವಿಚಾರ ಸಂಕಿರಣಗಳು ಮತ್ತು ಸಾರ್ವಜನಿಕ ಸಭೆಗಳ ಮೂಲಕ ವ್ಯಾಪಕ ಪ್ರಚಾರ ಸಂಘಟಿಸಲು ಒಂದು ರಾಷ್ಟ್ರೀಯ ಪ್ರಚಾರ ಸಮಿತಿ ರಚಿಸಲು ಸಮಾವೇಶ ನಿರ್ಧರಿಸಿದೆ.

ಪುಟ 1 ರಿಂದ

ಸಹಸ್ರಾರು ಜನರ ಬಂಧನ

ವರಲ್ಲಿ ಸಿ.ಪಿ.ಐ. (ಎಂ) ನ ಮುಖಂಡರಾದ ಎಸ್. ವೆಂಕಟಾಚಲಯ್ಯ, ಲಕ್ಕಣ್ಣ, ಜನತಾಪಕ್ಷದ ಶ್ರೀನಿವಾಸ್, ಜನತಾದಳದ ಮುನಿಯಪ್ಪ ಹಾಗೂ ಶಿವರಾಂ ಮತ್ತಿತರು ಭಾಗವಹಿಸಿದ್ದರು.

ಹಗರಿ ಬೊಮ್ಮನಹಳ್ಳಿ

ವಿರೋಧ ಪಕ್ಷಗಳ ಕರೆಯಂತೆ CPI (M) ಹಾಗೂ ಜನತಾದಳದ ಕಾರ್ಯಕರ್ತರು ಪಿಕೆಟಿಂಗ್ ಕಾರ್ಯಕ್ರಮ ನಡೆಸಿದ್ದರು ಕಾ। ರಾಮಾಂಜನೇಯ ಅವರ ಕ್ರಾಂತಿ ಗೀತೆಯೊಂದಿಗೆ ಆರಂಭವಾಗಿ ನಂತರ ಸುಮಾರು 200 ಜನರು ಬೀದಿಗಳಲ್ಲಿ ಮೆರವಣಿಗೆ ನಂತರ ತಾಲ್ಲೂಕು ಕಛೇರಿ ಯಲ್ಲಿ ಪಿಕೆಟಿಂಗ್ ನಡೆಸಿದರು. ನಂತರ ಎಲ್ಲಾ ಕಾರ್ಯಕರ್ತರು ತಾಲ್ಲೂಕು ಕಛೇರಿಯ ಒಳನುಗ್ಗಿ ಆಡಳಿತ ಯಂತ್ರವನ್ನು ನಿಲ್ಲಿಸಲು ಯತ್ನಿಸಿ, ಬಂಧನಕ್ಕೊಳಗಾದರು. ಈ ಬಂಧಿತರಲ್ಲಿ ಸಿಪಿಐ (ಎಂ) ನ ಕಾ। ವೀರ ಸಂಗಯ್ಯ, ಕೂಟಗಿ ಮಲ್ಲಿಕಾರ್ಜುನ, ಸುರೇಂದ್ರ ಹಾಗೂ ಜನತಾದಳದ ಪಂಚಾಕ್ಷರಯ್ಯ, ಮುಂತಾದವರಿದ್ದರು.

ಷಹಾಪುರ

ರಾಜ್ಯ ಸರಕಾರದ ಜನ ವಿರೋಧಿ ನೀತಿಯನ್ನು ಖಂಡಿಸಿ ರಸ್ತೆತಡೆ ಚಳುವಳಿ ನಡೆಸಿ, ನಂತರ ತಹಶೀಲ್ದಾರರಿಗೆ ಮನವಿ ಪತ್ರವನ್ನು ಅರ್ಪಿಸಲಾಯಿತು.

ಮೆರವಣಿಗೆಯ ನೇತೃತ್ವವನ್ನು ಸಿ.ಪಿ.ಐ.(ಎಂ)ನ ಚೆನ್ನಬಸಪ್ಪ ಆನೆಗುಂದಿ, ಜನತಾದಳದ ಮಲ್ಲಣ್ಣ ಬುದ್ದಿ, ಜನತಾ ಪಕ್ಷದ ಮಲ್ಲರಡ್ಡಪ್ಪ, ಮುಂತಾದವರು ವಹಿಸಿ ಕ್ರಾಂತಿಕಾರಿ ಘೋಷಣೆಗಳನ್ನು ಕೂಗುತ್ತಾ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ಕುಣಿಗಲ್

ವಿರೋಧ ಪಕ್ಷಗಳ ಕರೆಯ ಮೇರೆಗೆ ಇಲ್ಲಿನ ತಾಲ್ಲೂಕು ಕಛೇರಿಯೆದುರು ಪಿಕೆಟಿಂಗ್ ನಡೆಸಲಾಯಿತು. ನಂತರ ಬಸ್ ಸ್ಟ್ಯಾಂಡ್ ಬಳಿಸೇರಿ ರಸ್ತೆ ತಡೆ ಚಳುವಳಿ ನಡೆಸಲಾಯಿತು. ಚಳವಳಿಗಾರರನ್ನುದ್ದೇಶಿಸಿ CPM (ಜಿಲ್ಲಾ ಕಾರ್ಯದರ್ಶಿ ಕಾಂ। ಮಹಮೂದ್ ದಸ್ತಗರ್ ಮಾತನಾಡಿದರು. ಮೆರವಣಿಗೆ ನೇತೃತ್ವವನ್ನು ಕಾಂ। ಮಹಮಾದ್ ದಸ್ತಗೀರ್, ಕಾಂ। ಬಡೆಸಾಬ್, ಕಾಂ। ರಫೀಕ್ ಅಹ್ಮದ್ ವಹಿಸಿದ್ದರು.

ತುಮಕೂರು

ಇಲ್ಲಿನ ಪುರಭವನದ ಬಳಿ ರಸ್ತೆ ತಡೆ ಚಳುವಳಿ ನಡೆಸಲಾಯಿತು. ನಂತರ ಪೋಲೀಸರಿಂದ ಬಂಧನಕ್ಕೊಳಗಾದರು. ಈ ಮೆರವಣಿಗೆ ಹಾಗೂ ಚಳುವಳಿಯ ನೇತೃತ್ವವನ್ನು ಕಾಂ। ಹೆಚ್.ಸಿ. ಚನ್ನಬಸಪ್ಪ, ವಸೂದ್ ಖಾನ್, ಮುಮ್ತಾಜ್ ಉನ್ನೀಸಾ, ಈ ಬಸವರಾಜು ಮುಂತಾದವರು ವಹಿಸಿದ್ದರು ಬಂಧಿತರಲ್ಲಿ ಕಾರ್ಯಕರ್ತರೆ ಹೆಚ್ಚಾಗಿದ್ದರು ಒಂದು ವಿಶೇಷವಾಗಿತ್ತು. ಬಂಧಿತರನ್ನು ನಂತರ ಬಿಡುಗಡೆ ಮಾಡಲಾಯಿತು.

ಬಂಟ್ವಾಳ

ಜನತಾದಳ, ಸಿಪಿಐ (ಎಂ) ಸಿ.ಪಿ.ಐ. ಪಕ್ಷಗಳ ಕಾರ್ಯಕರ್ತರು ಬಂಟ್ವಾಳ ರೈಲ್ವೆ ನಿಲ್ದಾಣದ ಬಳಿ ಸೇರಿ ಬಿ ಸಿ ರೋಡಿನಲ್ಲಿ ಮೆರವಣಿಗೆ ನಡೆಸಿ ಬಂಧನಕ್ಕೊಳಗಾದರು.

ಈ ಚಳುವಳಿಯ ನಾಯಕತ್ವವನ್ನು ಜನತಾದಳದ ಡಾ। ಅಮ್ಮೆಂಬಳಬಾಳಪ್ಪ, ರಾಮಯ್ಯ ನಾಯಕ್, ಸಿ.ಐ.ಐ. ನ ಶ್ರೀ ವಿಶ್ವನಾಥ್ ನಾಯಕ್, ವಿಠಲ ಬಂಗೇರ್ರ, ಸಿ.ಪಿ.ಐ. (ಎಂ) ನ ಬಿ. ವಾಸು ಗಟ್ಟಿ, ಬಿ. ಹೂವಯ್ಯ, ಸಂಜೀವ ಬಂಗೇರಾ ಬಿ. ನಾರಾಯಣ ಮುಂತಾದವರು ವಹಿಸಿದ್ದರು.

ಹಾಸನ

ಹಾಸನ ಬಸ್ ನಿಲ್ದಾಣದ ಬಳಿ ಎರಡೂ ದ್ವಾರಗಳ ಬಳಿ ಕುಳಿತು ಬಸ್‌ಗಳ ಸಂಚಾರಕ್ಕೆ ಅಡ್ಡಿಪಡಿಸಿದ 103 ಮಂದಿ ಸಿ.ಪಿ.ಐ (ಎಂ) ಕಾರ್ಯಕರ್ತರನ್ನು ಬಂಧಿಸಿ ನಂತರ ಬಿಡುಗಡೆ ಮಾಡಲಾಯಿತು

ಶಿವಮೊಗ್ಗ

ಸಿ.ಪಿ.ಐ. (ಎಂ), ಸಿ.ಪಿ.ಐ. ಜನತಾದಳಕ್ಕೆ, ಸೇರಿದ ಸುಮಾರು ೧೫೦ ಕಾರ್ಯಕರ್ತರು ಹಾಗೂ ಸ್ಥಳೀಯ ಮುಖಂಡರು ಸರ್ಕಾರಿ ಬಸ್ ಸಂಚಾರಕ್ಕೆ ಅಡ್ಡಿಪಡಿಸಿದರು ಚಳುವಳಿಯಲ್ಲಿ ತೊಡಗಿದ್ದ ಎಲ್ಲರನ್ನು ಪೋಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು.

ಮಂಗಳೂರು

ನಗರದ ಜಿಲ್ಲಾಧಿಕಾರಿ ಕಛೇರಿ ಎದುರು ಪಿಕೆಟಿಂಗ್ ಹಾಗೂ ಬಸ್ ನಿಲ್ದಾಣದ ಬಳಿ ರಸ್ತೆ ತಡೆ ಚಳುವಳಿ ನಡೆಸಿದ ಸಿ.ಪಿ.ಐ. (ಎಂ) ಸಿ.ಪಿ.ಐ ಹಾಗೂ ಜನತಾದಳದ ಸುಮಾರು ಸಾವಿರಕ್ಕೂ ಹೆಚ್ಚಿನ ಕಾರ್ಯಕರ್ತರನ್ನು ಪೋಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು.

ಕೋಲಾರ

ವಿರೋಧ ಪಕ್ಷಗಳ ಕರೆಯ ಮೇರೆಗೆ ಕೋಲಾರದಲ್ಲಿ ರಸ್ತೆ ತಡೆ ಚಳುವಳಿ ನಡೆಸಿದ ವಿರೋಧ ಪಕ್ಷಗಳ ಸುಮಾರು 1200ಮಂದಿ ಕಾರ್ಯಕರ್ತರನ್ನು ಪೋಲೀಸರು ಬಂಧಿಸಿ ನಂತರ ಬಿಡು ಗಡೆ ಮಾಡಿದರು.

ರಾಜ್ಯದ ಇತರೆಡೆಗಳಲ್ಲಿ ವಿರೋಧ ಪಕ್ಷಗಳು ನಡೆಸಿದ ಪ್ರತಿಭಟನೆಯು ಅತ್ಯಂತ ಯಶಸ್ವಿಯಾಗಿ ನಡೆಯಿತು.

ಈ ವಾರ...

★ ಅಲ್ಲಲ್ಲಿನ ವಿಧಾನಸಭೆಗಳ ನಿರ್ಣಯಗಳಿಗೆ ಅಡ್ಡಗಾಲುಹಾಕದೆ ಅವುಗಳಿಗೆ ಪುರಸ್ಕಾರ ನೀಡುವುದು ರಾಷ್ಟ್ರೀಯರಂಗ ಸರಕಾರದ ನಿಲುವು ....ವಿಧಾನ ಪರಿಷತ್ತುಗಳ ಅವಶ್ಯಕತೆ ಕುರಿತಂತೆ ಎರಡು ಅಭಿಪ್ರಾಯ ಇರಲು ಸಾಧ್ಯ. ಆದರೆ ಆಂಧ್ರ ಮತ್ತು ತಮಿಳುನಾಡಿನಲ್ಲಿ ಸರಕಾರಗಳು ಬದಲಾದಂತೆ ಮೇಲ್ಮನೆಗಳ ಅಸ್ತಿತ್ವವೂ ಆಯಾ ಆಡಳಿತ ಪಕ್ಷಗಳ ಇಷ್ಟಾನಿಷ್ಟಗಳನ್ನು ಅವಲಂಬಿಸುವಂತಾಗಿದೆ. ಇದು ತೀರಾ ಅನಪೇಕ್ಷಣೀಯ

-ಪ್ರಜಾವಾಣಿ, ಮೇ 31

★ *ಗೊರ್ಬಚೇವ್‌ರ ವೇತನ ಇತ್ತೀಚೆಗೆ ದ್ವಿಗುಣಗೊಂಡಿತು. ಆದರೆ ಈಗಲೂ ವಿಶ್ವದ ಇತರ ಮುಖಂಡರಿಗೆ ಹೋಲಿಸಿದರೆ ಇದು ಬಹಳ ಕಡಿಮೆ. ಅಮೆರಿಕಾ ಅಧ್ಯಕ್ಷ ಬುಶ್‌ರವರ ಕೇವಲ 5 ದಿನಗಳ ವೇತನಕ್ಕೆ ಇದು ಸಮ*

-ಫೈನಾನ್ಶಿಯಲ್ ಟೈಮ್ಸ್ ವರದಿ

★ ಸಿಗರೇಟು ಕಂಪನಿಗಳ ಜಾಹೀರಾತಿನ ಗುರಿ ಈಗ ಮಕ್ಕಳು ಮತ್ತು ನವಯುವಕರು ಎಂದು ವಿಶ್ವ ಆರೋಗ್ಯಸಂಸ್ಥೆ ಆತಂಕ ವ್ಯಕ್ತಪಡಿಸಿದೆ. ಇದಕ್ಕಾಗಿ ಸಿಗರೇಟು ಉದ್ಯಮ ಮಿಲಿಯಗಟ್ಟಲೆ ಡಾಲರುಗಳನ್ನು ಸುರಿಯುತ್ತಿದೆ. ಇದಲ್ಲದೆ ಸಿಗರೇಟು ಬಹುರಾಷ್ಟ್ರೀಯ ಕಂಪನಿಗಳು ತೃತೀಯ ಜಗತ್ತಿನಲ್ಲಿ ಸಿಗರೇಟು ಜಾಹಿರಾತಿಗೆ ಹೆಚ್ಚೆಚ್ಚು ಹಣ ಸುರಿಯುತ್ತಿದೆ.

-ಐ.ಪಿ.ಎಸ್. ಸುದ್ದಿ, ಮೇ 31

★ 1988ರ ಅಂತ್ಯದ ವೇಳೆಗೆ ಸುಪ್ರಿಂ ಕೋರ್ಟ್‌ನಲ್ಲಿ ಇನ್ನೂ ಇತ್ಯರ್ಥವಾಗದೇ ಉಳಿದ ದಾವೆಗಳ ಸಂಖ್ಯೆ 1.88 ಲಕ್ಷ ದೇಶದ ಹೈಕೋರ್ಟ್‌ಗಳಲ್ಲಿ ಬಾಕಿ ಉಳಿದಿರುವ ದಾವೆಗಳು 14.7 ಲಕ್ಷ. ಆದರೆ ಒಂದು ದಾವೆಯ ಇತ್ಯರ್ಥಕ್ಕೆ ಸರಾಸರಿ 10-12ವರ್ಷ

-ಒಂದು ವರದಿ, ಜೂನ್ 1

★ ಲೋಕಸಭೆ ಮುಂದೆ ಸರಕಾರ ತಂದಿದ್ದ ಎರಡು ಸಂವಿಧಾನ-ತಿದ್ದುಪಡಿ ಮಸೂದೆಗಳ ಅಂಗೀಕಾರಕ್ಕೆ ಸಹಕರಿಸಲು ತಾನು ಹಾಕಿದ್ದ ಷರತ್ತನ್ನು ಅಂತ್ಯಕ್ಕೆ ಒಯ್ಯುವುದು ಅತರ್ಕ್ಯ ಎಂಬ ಕಟುಸತ್ಯ ಕಾಂಗ್ರೆಸ್‌ಗೂ ಮೊದಲೇ ಗೊತ್ತಿರಬೇಕು

-ಪ್ರಜಾವಾಣಿ, ಜೂನ್ 1

★ ಎರಡೂ ಸದನಗಳಲ್ಲಿ ಕಳೆದ ಏಳು ದಿನಗಳಲ್ಲಿ ಕಾಂಗ್ರೆಸ್‌ನ ವಿಶ್ವಾಸಾರ್ಹತೆ ಇನ್ನಷ್ಟು ಇಳಿಮುಖಗೊಂಡಿದೆ. ರಾಜ್ಯ ಸಭೆಯಲ್ಲಿ ಆ ಪಕ್ಷದ ಸದಸ್ಯರು. ಕೆ.ಕೆ. ತಿವಾರಿಯ ವರ್ತನೆಯನ್ನು ಸಮರ್ಥಿಸಿಕೊಳ್ಳುವ ಪ್ರಯತ್ನ ಮಾಡುತ್ತಾ ಸದನದಲ್ಲಿ ತಮ್ಮ ಮುಖಂಡ ಪಿ. ಶಿವಶಂಕರ್‌ರವರನ್ನು ಅವಮಾನಗೊಳಿಸಿದರು. ಕಾಂಗ್ರೆಸ್ ಪಕ್ಷದಲ್ಲಿ, ವಿದೇಶೀ ವ್ಯಕ್ತಿಗಳಿಗೆ ಅವಕಾಶ ಹೆಚ್ಚೆಚ್ಚು ಕಡಿಮೆಯಾಗುತ್ತಿದೆಯೆಂಬುದರ ಸ್ಪಷ್ಟ ಲಕ್ಷಣ ಇದು.

-ಟೈಂಸ್ ಆಫ್ ಇಂಡಿಯಾ,
ಸಂಸದೀಯ ವಿಮರ್ಶೆ, ಜೂನ್4

★ ಈಗಿನ ಅಸ್ವಸ್ಥತೆಯ (ಹೀಗೆಂದಾದರೂ ಅದನ್ನು ಹೇಳಬಹುದಾದರೆ) ಒಂದು ಲಕ್ಷಣವೆಂದರೆ ಬಿ.ಜೆ.ಪಿ ಹೆಚ್ಚೆಚ್ಚು ರಾಜಕೀಯವಾಗಿ ಪ್ರತ್ಯೇಕಗೊಳ್ಳುತ್ತಿರುವುದು—ಪಕ್ಷದ ವಕ್ತಾರ ಕಿಶನ್‌ಲಾಲ್ ಶರ್ಮಾರವರ ಹೇಳಿಕೆಯಲ್ಲಿ ಈ ರಾಜಕೀಯ ಪ್ರತ್ಯೇಕತೆಯಿಂದ ಮತಿಭ್ರಂಶತೆಯಲ್ಲದಿದ್ದರೂ ಬಯದ ನೆರಳಂತೂ ಕಾಣುತ್ತಿದೆ. ಇದು ಬಿ.ಜೆ.ಪಿ.ಯ ಸಂಸದೀಯ ಬಲಕ್ಕಾಗಲಿ, ಹೊರಗಡೆ ಇದ್ದಕ್ಕಿದ್ದಂತೆ ವ್ಯಾಪಿಸಿದೆ ಎಂದು ಹೇಳಿಕೊಳ್ಳುವ ಬೆಂಬಲಕ್ಕಾಗಿ ತಪ್ಪದಲ್ಲದ ಭಯ. ಬಹುಶ: ಈ ಬೆಂಬಲವೇ ಮೇಲ್ನೋಟಕ್ಕೆ ಕಾಣುವಷ್ಟು ಗಟ್ಟಿಯಾಗಿಲ್ಲ.

ಟೈಂಸ್ ಆಫ್ ಇಂಡಿಯಾ ಜೂನ್ 6

Printed and Published by P. Ramachandra Rao. on behalf of Communist Party of India (Marxist) Karnataka State Committee, L-56, K.V. Temple Street, Sultanpet, Bangalore - 560 053: Editor: P. RAMACHANDRA RAO